RNI: KARKAN\2019\78042



ಸಂಪಾದಕರು : ಸಿ.ಎನ್.ಸಮಗಂಡಿ.

# ಸತ್ಯಮಿಥ್ಯ

ನಿಮ್ಮ ಪ್ರತಿಬಿಂಬ ಕನ್ನಡ ದಿನ ಪತ್ರಿಕೆ

Satyamithi Kannada Daily Morning

ಚನ್ನು ಮೆನ್ಸ್‌ವೇರ್
ಕೊಳ್ಳಿಯವರ ಕ್ರಾಸ್.
ಚನ್ನು ಸ್ಟೀಲ್‌ವರ್ಲ್ಡ್
ಬಿ.ಎಸ್.ಎನ್.ಎಲ್. ಆಫೀಸ್ ಹತ್ತಿರ,
ಜೇಂಟ್ಸ್ ಸ್ಪೇಷಲಿಸ್ಟ್ ಟೇಲರ್
ಗಜೇಂದ್ರಗಡ-582114.
ಸೆಲ್ : 9986982482, 9686165708

ಸತ್ಯ, ಅಹಿಂಸೆ ಮತ್ತು ಸರಳತೆಯ ಆದರ್ಶಗಳಾದ ಗಾಂಧೀಜಿ-ಶಾಸ್ತ್ರಿ 2
ವಿಶೇಷ ಚೇತನ ಮಕ್ಕಳಿಗೆ ಉಪಹಾರ ವಿತರಿಸಿ ಮಾನವೀಯ ಸೇವೆ 3
ಸರಳತೆ ಶಕ್ತಿ, ವಿದ್ವತ್ತು ಸಂಪತ್ತು, ಸಮಾಜಮುಖಿ ಚಿಂತನೆ ಉಸಿರು 4

ಸಂಪುಟ(Volume): 1 ಸಂಚಿಕೆ (Issue): 81 ● ಪುಟ (Page): 4 ● ದರ: Rs. 4 ಶುಕ್ರವಾರ 2 ಅಕ್ಟೋಬರ್ 2026 ● 2 OCTOBER 2026 ● ಧಾರವಾಡ ● ಹಾವೇರಿ ● ಗದಗ ● ಕೊಪ್ಪಳ ● ವಿಜಯನಗರ ● ರಾಯಚೂರು ● ವಿಜಯಪುರ ● ಬಾಗಲಕೋಟೆ

# ಟೆಲ್ ಅವೀವ್ ಫ್ಲೈದುಬೈ ವಿಮಾನ ಹೈಜಾಕ್ ಯತ್ನ

## ಭಾರತೀಯ ಪೈಲಟ್ ಸಾಹಸ । 174 ಪ್ರಯಾಣಿಕರು ಬಚಾವ್

### ಭಾರತೀಯ ಪೈಲಟ್ ಕ್ಯಾಪ್ಟನ್ ಸ್ಮಿತ್ ಮಚ್ಚರ್ ಕುಟುಂಬಕ್ಕೆ ಪ್ರಧಾನಿ ಮೋದಿ ಕರೆ

**ಸತ್ಯಮಿಥ್ಯ ನ್ಯೂಸ್ ಡೆಸ್ಕ್ ಹೊಸದೆಹಲಿ:** ಟೆಲ್ ಅವೀವ್‌ಗೆ ತೆರಳುತ್ತಿದ್ದ ಫ್ಲೈದುಬೈ ವಿಮಾನದಲ್ಲಿ ಸಹ-ಪೈಲಟ್‌ನ ಮಾರಣಾಂತಿಕ ಹಲ್ಲೆ ಹಾಗೂ ಹೈಜಾಕ್ ಯತ್ನದ ವೇಳೆ ಅಸಾಧಾರಣ ಧೈರ್ಯ ಪ್ರದರ್ಶಿಸಿ ನೂರಾರು ಪ್ರಯಾಣಿಕರ ಪ್ರಾಣ ಉಳಿಸಿದ ಭಾರತೀಯ ಪೈಲಟ್ ಕ್ಯಾಪ್ಟನ್ ಸ್ಮಿತ್ ಮಚ್ಚರ್ ಅವರ ಪತ್ನಿ ಹಾಗೂ ತಾಪಿತ ಪೋಷಕರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ದೂರವಾಣಿಯಲ್ಲಿ ಮಾತನಾಡಿದ್ದಾರೆ.

ವಿಮಾನದ ಕಾಕ್‌ಪಿಟ್‌ನಲ್ಲಿ ಕ್ಯಾಪ್ಟನ್ ಸ್ಮಿತ್ ಮಚ್ಚರ್ ತೋರಿದ ಅಪ್ರತಿಮ ಸಾಹಸವನ್ನು ಪ್ರಧಾನಿ ಮೋದಿ ಈ ವೇಳೆ ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ. ಅತ್ಯಂತ ಗಂಭೀರವಾದ ಅಪಾಯದ ಪರಿಸ್ಥಿತಿಯಲ್ಲೂ ಮಚ್ಚರ್ ತೋರಿದ ದಿಟ್ಟತನವು ನೂರಾರು ಜನರ ಜೀವ ಉಳಿಸಲು ನೆರವಾಯಿತು ಎಂದು ಅವರ ಕುಟುಂಬದವರಿಗೆ ತಿಳಿಸಿದ್ದಾರೆ. ಅಲ್ಲದೆ, ಸೌದಿ ಅರೇಬಿಯಾದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕ್ಯಾಪ್ಟನ್ ಮಚ್ಚರ್‌ಗೆ ಅಗತ್ಯವಿರುವ ಎಲ್ಲಾ ರೀತಿಯ ರಾಜತಾಂತ್ರಿಕ ಹಾಗೂ ವೈದ್ಯಕೀಯ ನೆರವನ್ನು ಭಾರತೀಯ ದೂತವಾಸದ ಮೂಲಕ ಒದಗಿಸಲಾಗುತ್ತಿದೆ ಎಂದು ಪ್ರಧಾನಿಯವರು ಭರವಸೆ ನೀಡಿದ್ದಾರೆ.

ದುಬೈನಿಂದ ಇಸ್ರೇಲ್‌ನ ಟೆಲ್ ಅವೀವ್‌ಗೆ 174 ಪ್ರಯಾಣಿಕರೊಂದಿಗೆ ಹೊರಟಿದ್ದ ಫ್ಲೈದುಬೈ




ವಿಮಾನ ಈಜ1073 ರ ಹಾರಾಟದ ವೇಳೆ, ಒಮಾನ್ ಮೂಲದ ಸಹ-ಪೈಲಟ್ ಕ್ಯಾಪ್ಟನ್ ಮಚ್ಚರ್ ಅವರ ಮೇಲೆ ಚಾಕುವಿನಿಂದ ಹಲ್ಲೆ ನಡೆಸಿ ವಿಮಾನವನ್ನು ಅಪಹರಿಸಲು ಯತ್ನಿಸಿದ್ದನು. ದಾಳಿಯಲ್ಲಿ ತೀವ್ರವಾಗಿ ಗಾಯಗೊಂಡು ರಕ್ತದ ಮಡುವಿನಲ್ಲಿದ್ದರೂ ಎದೆಗುಂದದ ಕ್ಯಾಪ್ಟನ್ ಮಚ್ಚರ್, ತಮ್ಮ ಕೊನೆಯ ಹಂತದ ಶಕ್ತಿಯನ್ನು ಬಳಸಿ ಕಾಕ್‌ಪಿಟ್ ಬಾಗಿಲನ್ನು ತೆರೆದರು.

ತಕ್ಷಣವೇ ಒಳಗೆ ನುಗ್ಗಿದ ಪ್ರಯಾಣಿಕರು ಮತ್ತು ಸಿಬ್ಬಂದಿ ದಾಳಿಕೋರನನ್ನು ಹದ್ದುಬಸ್ತಿನಲ್ಲಿಟ್ಟರು. ಪರಿಣಾಮವಾಗಿ ಇತರೆ ಪೈಲಟ್‌ಗಳು ವಿಮಾನವನ್ನು ಸೌದಿ ಅರೇಬಿಯಾದ ತಬುಕ್ ವಿಮಾನ ನಿಲ್ದಾಣದಲ್ಲಿ ಸುರಕ್ಷಿತವಾಗಿ ಭೂಸ್ಪರ್ಶ ಮಾಡಲು ಸಾಧ್ಯವಾಯಿತು. ಈ ಧೈರ್ಯಶಾಲಿ ಸಾಹಸಕ್ಕಾಗಿ ಈಗಾಗಲೇ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಸೇರಿದಂತೆ ವಿಶ್ವದ ನಾಯಕರು ಕ್ಯಾಪ್ಟನ್ ಸ್ಮಿತ್ ಮಚ್ಚರ್ ಅವರನ್ನು 'ನೈಜ ನಾಯಕ' ಎಂದು ಕೊಂಡಾಡಿದ್ದಾರೆ.

# ಬರಗಾಲದಿಂದಾಗಿ 40,000 ಕೋಟಿ ರೂ.ಗೂ ಅಧಿಕ ಬೆಳೆ ನಷ್ಟ

## ಕೇಂದ್ರ ಸರ್ಕಾರದಿಂದ ತುರ್ತು ನೆರವು ಕೋರಿದ ಡಿಸಿಎಂ ಜಿ. ಪರಮೇಶ್ವರ

**ಬೆಂಗಳೂರು:** ಕರ್ನಾಟಕದಲ್ಲಿ ತೀವ್ರಗೊಳ್ಳುತ್ತಿರುವ ಬರಗಾಲದಿಂದಾಗಿ ಬೆಳೆ ನಷ್ಟವು 40,000 ಕೋಟಿ ರೂ.ಗೂ ಅಧಿಕವಾಗಬಹುದೆಂದು ಅಂದಾಜಿಸಲಾಗಿದ್ದು, ಉಪಮುಖ್ಯಮಂತ್ರಿ ಹಾಗೂ ಕಂದಾಯ ಸಚಿವ ಜಿ. ಪರಮೇಶ್ವರ್ ಅವರು ಕೇಂದ್ರ ಸರ್ಕಾರದಿಂದ ತುರ್ತು ನೆರವನ್ನು ಕೋರಿದ್ದಾರೆ; ಇದರಲ್ಲಿ ಬರ ಪರಿಹಾರದ ತ್ವರಿತ ಮೌಲ್ಯಮಾಪನ ಮತ್ತು ಬಿಡುಗಡೆಗೆ ಅವರು ಮನವಿ ಮಾಡಿದ್ದಾರೆ.



ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಬರೆದ ಪ್ರತ್ಯೇಕ ಪತ್ರಗಳಲ್ಲಿ, ಪರಮೇಶ್ವರ್ ಅವರು ಇಲ್ಲಿಯವರೆಗೆ 177 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ ಮತ್ತು ಸುಮಾರು 47.09 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 46,324.5 ಕೋಟಿ ರೂ. ಮೌಲ್ಯದ ಬೆಳೆ ನಷ್ಟವಾಗಿದೆ ಎಂದು ತಿಳಿಸಿದ್ದಾರೆ.

ರಾಜ್ಯ ಆರಂಭದಲ್ಲಿ 101 ಬರಪೀಡಿತ ತಾಲೂಕುಗಳಿಗಾಗಿ 3,705.30 ಕೋಟಿ ರೂ. ಕೋರಿ ಖಾರಿಫ್ 2026ರ ಬರಗಾಲದ ಮನವಿಯನ್ನು ಸಲ್ಲಿಸಿತ್ತು. ನಂತರದ ವೈಜ್ಞಾನಿಕ ಮೌಲ್ಯಮಾಪನದ ಬಳಿಕ, ಎರಡನೇ ಹಂತದಲ್ಲಿ ಇನ್ನೂ 76 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಯಿತು.

ಪ್ರಸ್ತುತ ಇನ್ನೂ 40 ತಾಲೂಕುಗಳಲ್ಲಿ ಸ್ಥಳ ಪರಿಶೀಲನೆ ನಡೆಯುತ್ತಿದ್ದು, ಮುಂಗಾರು ಹಂಗಾಮಿನ ಅಂತ್ಯದ ವೇಳೆಗೆ ಬರಪೀಡಿತ ತಾಲೂಕುಗಳ ಸಂಖ್ಯೆ 220ನ್ನು ದಾಟಬಹುದು. ಹೊಸದಾಗಿ ಘೋಷಿಸಲಾದ 76 ತಾಲೂಕುಗಳಲ್ಲಿ ನಡೆಸಿದ ಬೆಳೆ ನಷ್ಟದ ಮೌಲ್ಯಮಾಪನದಲ್ಲಿ, 26.08 ಲಕ್ಷ ಹೆಕ್ಟೇರ್ ಕೃಷಿ ಬೆಳೆಗಳು ಮತ್ತು 1.49 ಲಕ್ಷ ಹೆಕ್ಟೇರ್ ತೋಟಗಾರಿಕಾ ಬೆಳೆಗಳಿಗೆ ಹಾನಿಯಾಗಿರುವುದು ಕಂಡುಬಂದಿದೆ. ಈ ಹಾನಿಯ ಪ್ರಮಾಣವು ಶೇ. 33 ರಿಂದ ಶೇ. 100 ರಷ್ಟಿದ್ದು, ಬಾಧಿತ ಪ್ರದೇಶದ ಗಮನಾರ್ಹ ಭಾಗದಲ್ಲಿ ಶೇ. 50 ಕ್ಕಿಂತ ಹೆಚ್ಚು ನಷ್ಟ ಸಂಭವಿಸಿದೆ. ಒಟ್ಟಾರೆಯಾಗಿ 177 ಬರಪೀಡಿತ ತಾಲೂಕುಗಳಲ್ಲಿ ಸುಮಾರು 47.09 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟ ವರದಿಯಾಗಿದ್ದು, ಅಂದಾಜು ಆರ್ಥಿಕ ನಷ್ಟವು 46,324.5 ಕೋಟಿ ರೂ. ತಲುಪಿದೆ. ನಡೆಯುತ್ತಿರುವ ಮೌಲ್ಯಮಾಪನದ ಆಧಾರದ ಮೇಲೆ, ಖಾರಿಫ್ 2026ರ ಅವಧಿಯಲ್ಲಿ ಒಟ್ಟು ಬೆಳೆ ನಷ್ಟವು 55 ಲಕ್ಷ ಹೆಕ್ಟೇರ್ ಪ್ರದೇಶವನ್ನು ಮೀರುವ ಸಾಧ್ಯತೆಯಿದೆ ಎಂದು ತಿಳಿಸಿದ್ದಾರೆ.

# ಸಿಇಸಿ ಕಚೇರಿ ಎದುರು ಧರಣಿ ಕುಳಿತ ಡಿಕೆಶಿ

ಬೆಂಗಳೂರು: ಎಸ್‌ಐಆರ್ ಅಕ್ರಮ ಕುರಿತು ಸ್ವತಃ ಕರ್ನಾಟಕ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಬೆಂಗಳೂರಿನ ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸುತ್ತಿದ್ದಾರೆ. ರಾಜ್ಯ ಸಚಿವ ಸಂಪುಟವು ಸಿಎಂಗೆ ಸಾಥ್ ನೀಡಿದೆ. ಕಚೇರಿ ಬಾಗಿಲಿಗೆ ಕುಳಿತ ಡಿಕೆ ಶಿವಕುಮಾರ್ ಅವರು "ಫಾರಂ 7 ಮೂಲಕ ಮತದಾರರನ್ನು ಮತದಾರರ ಪಟ್ಟಿಯಿಂದ ಹೊರಗಿಡುವ ಷಡ್ಯಂತ್ರ ನಡೆಯುತ್ತಿದ್ದು, ಪ್ರಕರಣ ದಾಖಲಿಸುವಂತೆ" ಮನವಿ ಮಾಡಿದ್ದಾರೆ.

ಮುಖ್ಯ ಚುನಾವಣಾಧಿಕಾರಿ ಜ್ಞಾನೇಶ್ ಕುಮಾರ್ ಅವರಿಗೆ ಮಾಹಿತಿಯಿಲ್ಲದೇ ಇಂತಹ ಕೃತ್ಯ ನಡೆಯಲು ಸಾಧ್ಯವಿಲ್ಲ. ಎಸ್‌ಐಆರ್ ದೇಶದ ಅತಿ ದೊಡ್ಡ ವಂಚನೆಯಾಗಿದ್ದು, ಎಸ್‌ಐಆರ್ ರದ್ದಾಗಬೇಕು" ಎಂದು ಡಿಕೆ ಶಿವಕುಮಾರ್ ಆಗ್ರಹಿಸಿದರು. ಪ್ರತಿಭಟನೆ ವೇಳೆ ಕೆಪಿಸಿಸಿ ಅಧ್ಯಕ್ಷ ಬಿ ಕೆ ಹರಿಪ್ರಸಾದ್, ಸಚಿವ ಪ್ರಿಯಾಂಕ್ ಖರ್ಗೆ, ಎಸ್ ಎಸ್ ಮಲ್ಲಿಕಾರ್ಜುನ, ಈಶ್ವರ್ ಖಂಡ್ರೆ, ಎಂ ಬಿ ಪಾಟೀಲ್, ಬಿಡಿಎ ಅಧ್ಯಕ್ಷರಾದ ಎನ್ ಎ ಹ್ಯಾರಿಸ್, ವಿಧಾನ ಪರಿಷತ್ ಮಾಜಿ ಸಭಾಪತಿ ವಿ ಆರ್ ಸುದರ್ಶನ್ ಮತ್ತಿತರರು ಉಪಸ್ಥಿತರಿದ್ದರು.

**ಏಕಾಏಕಿ ಪ್ರತಿಭಟನೆಗೆ ಕಾರಣವೇನು?:** ರಾಜ್ಯದಲ್ಲಿ ಕಳೆದ ನಾಲ್ಕು ತಿಂಗಳಿನಿಂದ ಎಸ್‌ಐಆರ್ ಪ್ರಕ್ರಿಯೆ ನಡೆಯುತ್ತಿದೆ. ಈಗಾಗಲೇ ಕರಡು ಮತದಾರರ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ಇದರಲ್ಲಿ 1.07 ಕೋಟಿ ಲಕ್ಷ ಮತದಾರರ ಹೆಸರು ಡಿಲೀಟ್ ಮಾಡಲಾಗಿದ್ದು, 43 ಲಕ್ಷ ಮಂದಿಗೆ ನಾನಾ ಕಾರಣಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ. ಜತೆಗೆ ಫಾರಂ ನಂಬರ್ 7 ರ ಮೂಲಕ ಮತದಾರರ ಹೆಸರು ಡಿಲೀಟ್ ಮಾಡಲು ಅವಕಾಶ ನೀಡಲಾಗಿದೆ. ಸದ್ಯ ಸಚಿವ ಎಂಬಿ ಪಾಟೀಲ್ ಸೇರಿದಂತೆ ಹಲವು ಸಚಿವರು, ಶಾಸಕರ ಮತದಾರರ ಕ್ಷೇತ್ರಗಳಲ್ಲಿ ಪೂರ್ವಮುದ್ರಿತ ಮತದಾರರ ವಿವರಗಳನ್ನು ಒಳಗೊಂಡ ಫಾರಂ 7 ಮೂಲಕ ರಾಜ್ಯದ ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಅರ್ಹ ಮತದಾರರನ್ನು ಮತದಾರರ ಪಟ್ಟಿಯಿಂದ ಹೊರಗಿಡಲಾಗುತ್ತಿದೆ ಎಂಬ ಆರೋಪ ಕೇಳಿ ಬಂದಿದೆ. ಹೀಗಾಗಿ, ಸಿಎಂ ಪ್ರತಿಭಟನೆಗಿಳಿದಿದ್ದಾರೆ.

**ಸಚಿವರ ಕ್ಷೇತ್ರಗಳಲ್ಲೇ ಸಾವಿರಾರು ಮತಗಳ ಡಿಲೀಟ್ ಗೆ ಪಿತೂರಿ:** "ಬಬಲೇಶ್ವರದಲ್ಲಿ 1634 ಸಾವಿರಕ್ಕೂ ಅಧಿಕ ಇಂತಹ ಅರ್ಜಿಗಳನ್ನು ಸಲ್ಲಿಸಲಾಗಿದೆ. ಬಿಜಾಪುರದಲ್ಲಿ 14 ಸಾವಿರ ಅರ್ಜಿಗಳನ್ನು ಸಲ್ಲಿಸಲಾಗಿತ್ತು. ಭಾಲ್ಕಿಯಲ್ಲಿ 3244 ಇಂತಹ ಅರ್ಜಿಗಳನ್ನು ಬಿಜೆಪಿ ಕಾರ್ಯಕರ್ತರು ನೀಡಿದ್ದಾರೆ. ಭಾಲ್ಕಿ, ನರಸಿಂಹರಾಜಪುರ, ಬೆಳಗಾವಿ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಅರ್ಹ ಮತದಾರರನ್ನು ಮತದಾರರ ಪಟ್ಟಿಯಿಂದ ತೆಗೆದು ಹಾಕಲು ಫಾರಂ 7 ನೀಡಿರುವುದು ಕಂಡು ಬಂದಿದೆ. ಮತ್ತೆ ಕೆಲವು ಕ್ಷೇತ್ರಗಳಲ್ಲಿ 5-10 ಸಾವಿರ ಮತಗಳನ್ನು ಡಿಲೀಟ್ ಮಾಡುವ ಷಡ್ಯಂತ್ರ ನಡೆದಿದೆ. ಪ್ರಕಾಶ್ ರಾಜ್ ಅವರ ನೇತೃತ್ವದ ಸಿವಿಲ್ ಸೊಸೈಟಿ ಸದಸ್ಯರು ಮತಗಟ್ಟೆಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದ್ದಾರೆ" ಎಂದು ಸಿಎಂ ಮಾಹಿತಿ ನೀಡಿದರು.

"ಬಿಜೆಪಿಯ ಅಧಿಕೃತ ಕಾರ್ಯಕರ್ತರು ತಮ್ಮ ಹೆಸರಿನಲ್ಲಿ ನೂರಾರು ಇಂತಹ ಫಾರಂ 7 ಅರ್ಜಿಗಳನ್ನು ಸಲ್ಲಿಸಿರುವುದನ್ನು ನಾವು ಪತ್ತೆಹಚ್ಚಿದ್ದೇವೆ. ಕೆಲವು ಕಡೆ ಬಿಜೆಪಿ ಕಾರ್ಯಕರ್ತರು ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದಾರೆ. ಬಿಜೆಪಿ ಹಾಗೂ ಜನತಾದಳದ ಷಡ್ಯಂತ್ರ ಇದೀಗ ಬಯಲಾಗಿದೆ. ಫಾರಂ 7 ರಲ್ಲಿ ಮಾಹಿತಿಯನ್ನು ಮುದ್ರಿಸಿ ಬಿಜೆಪಿ ಕಾರ್ಯಕರ್ತರು ಈ ಕಾರ್ಯದಲ್ಲಿ ತೊಡಗಿದ್ದಾರೆ. ಕೆಲವು ಕಡೆ ಈ ಅರ್ಜಿ ನೀಡಿದ್ದ ಬಿಜೆಪಿ ನಾಯಕರು ಹಾಗೂ ಕಾರ್ಯಕರ್ತರು ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದಾರೆ. ಎಲ್ಲಿ ಈ ಫಾರಂ ಮುದ್ರಿತವಾಗುತ್ತಿದೆ? ಇದರ ಹಿಂದೆ ಯಾವ ಪಕ್ಷದ ನಾಯಕರು ಇದ್ದಾರೆ? ಚುನಾವಣಾ ಆಯೋಗ ಇದರ ಹಿಂದೆ ಇರುವ ಪ್ರತಿಯೊಬ್ಬರನ್ನೂ ಪತ್ತೆ ಹಚ್ಚಿ ಕಠಿಣ ಕಾನೂನು ಕ್ರಮಗಳನ್ನು ಜರುಗಿಸಬೇಕು" ಎಂದು ಒತ್ತಾಯಿಸಿದರು.



# ಬಸ್ ಪ್ರಯಾಣ ದರ ಏರಿಕೆ ಶೀಘ್ರ

## ಸುಳಿವು ನೀಡಿದ ಸಾರಿಗೆ ಸಚಿವ ಭೈರತಿ ಸುರೇಶ । ಶಕ್ತಿ ಸ್ಮಾರ್ಟ್ ಕಾರ್ಡ್ ವಿತರಣೆ

**ಬೆಂಗಳೂರು:** ಕರ್ನಾಟಕದಲ್ಲಿ ಹಾಲಿನ ದರ ಏರಿಕೆಗೆ ಬೇಡಿಕೆ ಬೆನ್ನಲ್ಲೇ, ಬಸ್ ಪ್ರಯಾಣವೂ ದುಬಾರಿಯಾಗಲಿದೆ ಎಂಬ ಮಾತುಗಳಿಗೆ ಸ್ವತಃ ಸಾರಿಗೆ ಸಚಿವರೇ ಪುಷ್ಟಿ ನೀಡಿದ್ದಾರೆ. ಸಾರಿಗೆ ನಿಗಮಗಳ ಬಸ್ ದರ ಹೆಚ್ಚಳ ಸಂಬಂಧ ರಚಿಸಿದ ನಿವೃತ್ತ ಐಎಎಸ್ ಅಧಿಕಾರಿ ಅತುಲ್ ತಿವಾರಿ ನೇತೃತ್ವದ ಉನ್ನತ ಮಟ್ಟದ ಸಮಿತಿ ಒಂದೆರಡು ದಿನಗಳಲ್ಲಿ ವರದಿ ಸಲ್ಲಿಸಲಿದ್ದು, ಸಂಪುಟದ ಅನುಮೋದನೆ ಪಡೆದು ಶೀಘ್ರ ದರ ಪರಿಷ್ಕರಿಸಲಾಗುವುದು ಎಂದು ಸಾರಿಗೆ ಸಚಿವ ಬೈರತಿ ಸುರೇಶ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, "ಸಾರಿಗೆ ನಿಗಮಗಳು ಆರ್ಥಿಕವಾಗಿ ತೀವ್ರ ಸಂಕಷ್ಟ ಎದುರಿಸುತ್ತಿರುವುದರಿಂದ ಪ್ರಯಾಣ ದರ ಹೆಚ್ಚಳ ಅನಿವಾರ್ಯವಾಗಿದೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಕಳೆದ ಒಂದು ವರ್ಷದಲ್ಲಿ ನಾಲ್ಕು ಬಾರಿ ಡೀಸೆಲ್ ಬೆಲೆ ಹೆಚ್ಚಳ ಮಾಡಿದೆ. ಇದರ ಪರಿಣಾಮ ಪ್ರತಿ ಲೀಟರ್ ಡೀಸೆಲ್ ಬೆಲೆ 15ರಿಂದ 16 ರೂ. ಹೆಚ್ಚಳವಾಗಿದ್ದು, ನಮ್ಮ ಸಾರಿಗೆ ನಿಗಮಗಳಿಗೆ ವಾರ್ಷಿಕ 8 ಸಾವಿರ ಕೋಟಿ ರೂ. ನಷ್ಟವಾಗುತ್ತಿದೆ," ಎಂದು ಹೇಳಿದರು.

**ಸಿಎಂ ಅನುಮೋದನೆ ಬಳಿಕ ನಿರ್ಧಾರ:** "ಅತುಲ್ ತಿವಾರಿ ಅವರು ಎಲ್ಲಾ ಸಾರಿಗೆ ನಿಗಮಗಳ ಆರ್ಥಿಕ ಪರಿಸ್ಥಿತಿ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಆ ವರದಿಯನ್ನು ಸಚಿವ ಸಂಪುಟ ಸಭೆಯಲ್ಲಿಟ್ಟು ಚರ್ಚಿಸಿ, ಮುಖ್ಯಮಂತ್ರಿಗಳ ಅನುಮೋದನೆ



ಪಡೆದ ನಂತರ ಪ್ರಯಾಣ ದರವನ್ನು ಪರಿಷ್ಕರಣೆ ಮಾಡಲಾಗುತ್ತದೆ," ಎಂದು ಸ್ಪಷ್ಟ ಪಡಿಸಿದರು.

**ಶಕ್ತಿ ಕಾರ್ಡ್ ವಿತರಣೆ:** "ಅನ್ಯ ರಾಜ್ಯಗಳ ಮಹಿಳೆಯರೂ ಬಸ್‌ಗಳಲ್ಲಿ ಉಚಿತ ಪ್ರಯಾಣ ಮಾಡುತ್ತಿರುವ ಬಗ್ಗೆ ವರದಿಗಳು ಬರುತ್ತಿವೆ. ಇದನ್ನು ತಪ್ಪಿಸುವ ನಿಟ್ಟಿನಲ್ಲಿ ನಮ್ಮ ರಾಜ್ಯದ ಮಹಿಳೆಯರಿಗೆ ಮಾತ್ರ ಸೀಮಿತಗೊಳಿಸಲು ಸ್ಮಾರ್ಟ್ ಕಾರ್ಡ್ ವ್ಯವಸ್ಥೆಯನ್ನು ಜಾರಿಗೆ ತರುತ್ತಿದ್ದೇವೆ. ಮೊದಲ ಹಂತದಲ್ಲಿ 1 ಕೋಟಿ ಮಹಿಳೆಯರಿಗೆ ನೀಡುವ ದಿಸೆಯಲ್ಲಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿದ್ದು, ಎರಡು ತಿಂಗಳಲ್ಲಿ ಸ್ಮಾರ್ಟ್ ಕಾರ್ಡ್ ಸಿದ್ಧವಾಗಲಿವೆ," ಎಂದು ಬೈರತಿ ಸುರೇಶ್ ತಿಳಿಸಿದರು.

# ಏಷ್ಯನ್ ಗೇಮ್ಸ್ ಹಾಕಿ: ಪಾಕಿಸ್ತಾನ ಮಣಿಸಿ ಫೈನಲ್‌ಗೆ ಲಗ್ಗೆಯಿಟ್ಟ ಭಾರತ!

**ಸತ್ಯಮಿಥ್ಯ ನ್ಯೂಸ್ ಡೆಸ್ಕ್ :** ಏಷ್ಯನ್ ಗೇಮ್ಸ್ 2026ರ ಪುರುಷರ ಹಾಕಿ ಸೆಮಿಫೈನಲ್‌ನ ಅತ್ಯಂತ ರೋಚಕ ಪಂದ್ಯದಲ್ಲಿ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನವನ್ನು 4-3 ಅಂತರದಿಂದ ಮಣಿಸಿದ ಭಾರತ ತಂಡವು ಫೈನಲ್ ಪ್ರವೇಶಿಸಿದೆ. ಈ ಗೆಲುವಿನೊಂದಿಗೆ ಭಾರತವು ಚಿನ್ನದ ಪದಕ ಹಾಗೂ ಲಾಸ್ ಏಂಜಲೀಸ್ ಒಲಿಂಪಿಕ್ಸ್ ಪ್ರವೇಶಕ್ಕೆ ಕೇವಲ ಇನ್ನೊಂದೇ ಹೆಜ್ಜೆ ಬಾಕಿ ಇರಿಸಿಕೊಂಡಿದೆ.

ತೀವ್ರ ಪೈಪೋಟಿಯಿಂದ ಕೂಡಿದ್ದ ಈ ಪಂದ್ಯದ ಅಂತಿಮ ಕ್ವಾರ್ಟರ್‌ನ ಕೊನೆಯ ನಿಮಿಷದಲ್ಲಿ ಅಭಿಷೇಕ್ ಅದ್ಭುತವಾದ ಗೆಲುವಿನ ಗೋಲು ಬಾರಿಸಿ ಭಾರತಕ್ಕೆ ಭರ್ಜರಿ ಜಯ ತಂದುಕೊಟ್ಟರು.

**ಚೇತರಿಸಿಕೊಂಡಿದ್ದ ಪಾಕಿಸ್ತಾನ:** ಪಂದ್ಯದ ಆರಂಭದಲ್ಲಿ ಭಾರತ ಸ್ಪಷ್ಟ ಮೇಲುಗೈ ಸಾಧಿಸಿತ್ತು. ನಾಯಕ ಹರ್ಮನ್‌ಪ್ರೀತ್ ಸಿಂಗ್ ಮೊದಲ ಕ್ವಾರ್ಟರ್‌ನಲ್ಲಿ ಪೆನಾಲ್ಟಿ ಕಾರ್ನರ್‌ಗಳ ಮೂಲಕ ಎರಡು ಗೋಲುಗಳನ್ನು ಗಳಿಸಿದರೆ, ಎರಡನೇ ಕ್ವಾರ್ಟರ್‌ನಲ್ಲಿ ಸುಖ್‌ಜೀತ್ ಸಿಂಗ್ ಫೀಲ್ಡ್ ಗೋಲ್ ಬಾರಿಸಿ ಭಾರತಕ್ಕೆ 3-0 ಸ್ಪಷ್ಟ ಮುನ್ನಡೆ ತಂದುಕೊಟ್ಟರು. ಆದರೆ, ಪಂದ್ಯದಲ್ಲಿ ಅದ್ಭುತವಾಗಿ ಚೇತರಿಸಿಕೊಂಡ ಪಾಕಿಸ್ತಾನ ತೀವ್ರ ಸವಾಲೊಡ್ಡಿತು. ಮೊದಲಾರ್ಧ ಮುಗಿಯುವ ಸ್ವಲ್ಪ ಮೊದಲು ಪಾಕಿಸ್ತಾನದ ಅಬು ಮಹಮೂದ್ ಗೋಲು ಬಾರಿಸಿ ಅಂತರವನ್ನು 3-1ಕ್ಕೆ ತಗ್ಗಿಸಿದರು.

ತದನಂತರ, ಮೂರನೇ ಕ್ವಾರ್ಟರ್‌ನ ಅಂತ್ಯದ 45ನೇ ನಿಮಿಷದಲ್ಲಿ ಹನ್ನಾನ್ ಶಾಹಿದ್ ಪಾಕ್



ಪರ ಮತ್ತೊಂದು ಗೋಲು ಗಳಿಸಿದರು. ನಾಲ್ಕನೇ ಕ್ವಾರ್ಟರ್‌ನ ಆರಂಭದಲ್ಲಿ ವಾಹೀದ್ ರಾಣಾ ಗೋಲು ಬಾರಿಸುವುದರೊಂದಿಗೆ ಪಾಕಿಸ್ತಾನವು 3-3 ಸಮಬಲ ಸಾಧಿಸಿತು.

**ಅಂತಿಮ ನಿಮಿಷದ ರೋಚಕತೆ:** ಉಭಯ ತಂಡಗಳು 3-3 ಸಮಬಲದೊಂದಿಗೆ ತೀವ್ರ ಪೈಪೋಟಿ ನಡೆಸುತ್ತಿದ್ದಾಗ, ಪಂದ್ಯದ ಅಂತಿಮ ನಿಮಿಷದಲ್ಲಿ ಅಭಿಷೇಕ್ ಗಳಿಸಿದ ಗೆಲುವಿನ ಗೋಲು ಭಾರತದ ಫೈನಲ್ ಹಾದಿಯನ್ನು ಸುಗಮಗೊಳಿಸಿತು.

ದಕ್ಷಿಣ ಕೊರಿಯಾ ಮತ್ತು ಮಲೇಷ್ಯಾ ನಡುವಿನ ಮತ್ತೊಂದು ಸೆಮಿಫೈನಲ್ ಪಂದ್ಯದಲ್ಲಿ ಗೆದ್ದ ವಿಜೇತರನ್ನು ಭಾರತವು ಫೈನಲ್‌ನಲ್ಲಿ ಎದುರಿಸಲಿದೆ.

# ಸರ್ಕಾರದ ಉರ್ದು ಹಬ್ಬಕ್ಕೆ ಬಿಜೆಪಿ, ಕನ್ನಡಪರ ಸಂಘಟನೆಗಳ ವಿರೋಧ

**ಬೆಂಗಳೂರು :** ಕರ್ನಾಟಕ ರಾಜ್ಯ ಸರ್ಕಾರದ ವತಿಯಿಂದ ಆಯೋಜಿಸಲು ಉದ್ದೇಶಿಸಲಾಗಿರುವ 'ಉರ್ದು ಹಬ್ಬದ' ಬಗ್ಗೆ ಬಿಜೆಪಿ ಈಗಾಗಲೇ ತೀವ್ರ ವಿರೋಧವನ್ನು ವ್ಯಕ್ತ ಪಡಿಸಿವೆ. ಇನ್ನು, ವಿವಿಧ ಕನ್ನಡ ಪರ ಸಂಘಟನೆಗಳೂ, ಸರ್ಕಾರದ ನಿರ್ಧಾರಕ್ಕೆ ವಿರೋಧವನ್ನು ವ್ಯಕ್ತ ಪಡಿಸಿವೆ. ನವೆಂಬರ್ ಒಂಬತ್ತರಂದು, ಉರ್ದು ಹಬ್ಬ ಆಯೋಜಿಸಲು ಸರ್ಕಾರ ನಿರ್ಧರಿಸಿದೆ ಎಂದು ಆರೋಗ್ಯ ಸಚಿವ ಯುಟಿ ಖಾದರ್ ಹೇಳಿದ್ದರು.



ಉರ್ದು ಹಬ್ಬವನ್ನು ಆಯೋಜಿಸಲು ವಿಧಾನಸೌಧವನ್ನು ಬಳಸಿಕೊಂಡರೆ, ಮುಂದಿನ ದಿನಗಳಲ್ಲಿ ಭಾಷಾವಾರು ಸಾಂಸ್ಕೃತಿಕ ಕಾರ್ಯಕ್ರಮಗಳ ಶಾಶ್ವತ ವೇದಿಕೆಯಾಗುವುದಿಲ್ಲವೇ ಎಂದು ಬಿಜೆಪಿ ಶಾಸಕ ಸುರೇಶ್ ಕುಮಾರ್ ಪ್ರಶ್ನಿಸಿದ್ದಾರೆ. ಉರ್ದು ಹಬ್ಬ ಓಲೈಕೆಯೇ ಹೊರೆತು ಇದರಿಂದ ಕನ್ನಡಿಗರಿಗೆ ಯಾವ ಉಪಯೋಗ ಇಲ್ಲ ಎಂದು ಕನ್ನಡ ಪರ ಸಂಘಟನೆಗಳು ನಿಲುವನ್ನು ತಾಳಿವೆ.

**ಕರವೇ ರಾಜ್ಯಾಧ್ಯಕ್ಷರಾದ ಟಿಎ ನಾರಾಯಣ ಗೌಡ್ರ ನಿಲುವು:** ಕರವೇ ರಾಜ್ಯಾಧ್ಯಕ್ಷರಾದ ಟಿಎ ನಾರಾಯಣ ಗೌಡ್ರು ಈ ಸಂಬಂಧ ಟ್ವೀಟ್ (ಎಕ್ಸ್) ಮಾಡಿದ್ದಾರೆ. "ವಿಧಾನಸೌಧದ ಮೆಟ್ಟಿಲುಗಳ ಮೇಲೆ ರಾಜ್ಯ ಸರ್ಕಾರ ಉರ್ದು ಹಬ್ಬ ಆಯೋಜಿಸುವ ನಿರ್ಧಾರ ಮಾಡಿದೆ ಎಂಬ ಮಾಧ್ಯಮ ವರದಿಗಳನ್ನು ಗಮನಿಸಿದೆ. ಇದೊಂದು ಅವಿವೇಕದ, ಅಪ್ರಬುದ್ಧ, ದುರಹಂಕಾರದ ನಡೆ. ಏನು ಮಾಡಿದರೂ ನಡೆಯುತ್ತದೆ ಎಂಬ ಅಧಿಕಪ್ರಸಂಗದ ನಿಲುವು. ಸರ್ಕಾರವೇ ಮುಂದೆ ನಿಂತು ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡಲು ನಿಂತ ಹಾಗೆ ಕಾಣುತ್ತಿದೆ. ಇದನ್ನು ಕರ್ನಾಟಕ ರಕ್ಷಣಾ ವೇದಿಕೆ ತೀವ್ರವಾಗಿ ಖಂಡಿಸುವುದು ಮಾತ್ರವಲ್ಲ, ಈ ಕಾರ್ಯಕ್ರಮ ನಡೆಯಲು ಯಾವುದೇ ಕಾರಣಕ್ಕೂ ಅವಕಾಶ ನೀಡುವುದಿಲ್ಲ" ಎಂದು ಬರೆದಿದ್ದಾರೆ.

# ವಿಶೇಷ ಚೇತನ ಮಕ್ಕಳಿಗೆ ಉಪಹಾರ ವಿತರಿಸಿ ಮಾನವೀಯ ಸೇವೆ

## ಕನಕದಾಸ ಶಿಕ್ಷಣ ಸಮಿತಿಯ ಚೇರ್ಮನ್ ರವೀಂದ್ರನಾಥ ದಂಡಿನ ಅವರ 54ನೇ ಜನ್ಮದಿನಾಚರಣೆ

**ಸತ್ಯಮಿಥ್ಯ ಸುದ್ದಿಮೂಲ ಗದಗ:**
ಕನಕದಾಸ ಶಿಕ್ಷಣ ಸಮಿತಿಯ ಚೇರ್ಮನ್ ಹಾಗೂ ಭಾರತ ಸರ್ಕಾರದ ಆಹಾರ ನಿಗಮದ ರಾಜ್ಯಸದಸ್ಯರಾದ ರವೀಂದ್ರನಾಥ ಬಿ.ದಂಡಿನ ಅವರ 54ನೇ ವರ್ಷದ ಹುಟ್ಟುಹಬ್ಬವನ್ನು ವಿಶಿಷ್ಟ ಹಾಗೂ ಮಾನವೀಯ ಸೇವೆಯ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.
ಕನಕದಾಸ ಶಿಕ್ಷಣ ಸಮಿತಿಯ ಕೆಎಸ್ಎಸ್ ಪದವಿ ಮಹಾವಿದ್ಯಾಲಯ ಹಾಗೂ ಕೆವಿಎಸ್ಆರ್ ಸಂಕೇತ ಪದವಿಪೂರ್ವ ಮಹಾವಿದ್ಯಾಲಯಗಳ ವತಿಯಿಂದ ಬೆಟಗೇರಿಯ ಮಂಜು ಶಿಕ್ಷಣ ಸಂಸ್ಥೆಯ ಬುದ್ಧಿಮಾಂದ್ಯ ಹಾಗೂ ವಿಶೇಷ ಚೇತನ ಮಕ್ಕಳಿಗೆ ಬೆಳಗಿನ ಉಪಹಾರವನ್ನು ವಿತರಿಸುವ ಮೂಲಕ ಜನ್ಮದಿನಾಚರಣೆಯನ್ನು ವಿಶೇಷವಾಗಿ ಆಚರಿಸಲಾಯಿತು.
ಈ ಸಂದರ್ಭದಲ್ಲಿ ಕನಕದಾಸ ಶಿಕ್ಷಣ ಸಮಿತಿಯ ಕುಮಾರ ಸಂಕೇತ ರವಿ ದಂಡಿನ ಅವರ ನೇತೃತ್ವದಲ್ಲಿ ಮಕ್ಕಳೊಂದಿಗೆ ಆತ್ಮೀಯವಾಗಿ ಬೆರೆತು, ಅವರೊಂದಿಗೆ ಸಂತಸ ಹಂಚಿಕೊಳ್ಳಲಾಯಿತು. ಹುಟ್ಟುಹಬ್ಬದ ಸಂಭ್ರಮವನ್ನು ಕೇವಲ ವೈಯಕ್ತಿಕ ಆಚರಣೆಗೆ ಸೀಮಿತಗೊಳಿಸದೆ, ವಿಶೇಷ ಚೇತನ ಮಕ್ಕಳೊಂದಿಗೆ ಸೇವೆ ಹಾಗೂ ಮಾನವೀಯತೆಯ ಮೂಲಕ ಆಚರಿಸಿರುವುದು ಕಾರ್ಯಕ್ರಮದ ವಿಶೇಷತೆಯಾಗಿತ್ತು.
ಕಾರ್ಯಕ್ರಮದಲ್ಲಿ ಕೆಎಸ್ಎಸ್ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯರು, ಪದವಿಪೂರ್ವ ಮಹಾವಿದ್ಯಾಲಯಗಳ ಪ್ರಾಚಾರ್ಯರು, ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದು, ಜನ್ಮದಿನದ ಶುಭಾಶಯಗಳನ್ನು ಸಲ್ಲಿಸಿದರು.




## ಡಾ. ಸಂಗೀತಾ ತೊಲಗಿ ಪ್ರಾಂಶುಪಾಲರಾಗಿ ನೇಮಕ

**ಸತ್ಯಮಿಥ್ಯ ಸುದ್ದಿಮೂಲ ಮುಗಳಖೋಡ:**
ಡಾ. ಸಂಗೀತಾ ಬಿ. ತೊಲಗಿ ಅವರು ಕಿತ್ತೂರಿನ ಕೆ.ಎನ್.ವಿ.ವಿ.ಎಸ್. ಕಲೆ ಮತ್ತು ವಾಣಿಜ್ಯ ಕಾಲೇಜಿನ ಪ್ರಾಂಶುಪಾಲರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಪ್ರಬುದ್ಧ ಶಿಕ್ಷಣ ತಜ್ಞೆಯಾಗಿರುವ ಇವರು ಉನ್ನತ ಶಿಕ್ಷಣ ಕ್ಷೇತ್ರದಲ್ಲಿ 18 ವರ್ಷಗಳಿಗೂ ಹೆಚ್ಚಿನ ಅನುಭವವನ್ನು ಹೊಂದಿದ್ದು, ಬೋಧನೆ, ಶೈಕ್ಷಣಿಕ ಆಡಳಿತ, ವಿದ್ಯಾರ್ಥಿ ಅಭಿವೃದ್ಧಿ ಮತ್ತು ಸಾಂಸ್ಥಿಕ ಚಟುವಟಿಕೆಗಳಲ್ಲಿ ಮಹತ್ವದ ಕೊಡುಗೆಗಳನ್ನು ನೀಡಿದ್ದಾರೆ.



ಡಾ. ತೊಲಗಿ ಅವರು ವಾಣಿಜ್ಯ ವಿಷಯದಲ್ಲಿ ಪಿಎಚ್‌ಡಿ , ಇಗ್ನೂ ನಿಂದ ಎಂಬಿಎ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಕಾಂ.ಹಾಗೂ ಮನಃಶಾಸ್ತ್ರದಲ್ಲಿ ಎಂ.ಎಸ್ಸಿ. ಪದವಿಗಳನ್ನು ಪಡೆದಿದ್ದಾರೆ ಮತ್ತು ಕೆ-ಸೆಟ್ ಅರ್ಹತೆ ಹೊಂದಿದ್ದಾರೆ. ಇವರು ವಾಣಿಜ್ಯ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಲ್ಲದೆ, 15 ವರ್ಷಗಳಿಗೂ ಹೆಚ್ಚು ಕಾಲ ಉದ್ಯೋಗ ನಿಯೋಜನಾ ಅಧಿಕಾರಿ ಎನ್ ಎ ಎ ಸಿ ಸಂಯೋಜಕರು ಮತ್ತು ಓಕಖಿಇಐ ಖಕಔಅ ನಂತಹ ಪ್ರಮುಖ ಸಾಂಸ್ಥಿಕ ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ.
ಪ್ರಮಾಣೀಕೃತ 'ಸಾಫ್ಟ್‌ಸ್ಕಿಲ್ಸ್' (ಮೃದು ಕೌಶಲ) ತರಬೇತುದಾರರಾಗಿರುವ ಇವರು, ವಿದ್ಯಾರ್ಥಿ ಮಾರ್ಗದರ್ಶನ, ವೃತ್ತಿ ಮಾರ್ಗದರ್ಶನ, ಕೌಶಲ ಅಭಿವೃದ್ಧಿ, ಯೋಜನಾ ಮಾರ್ಗದರ್ಶನ ಮತ್ತು ಉದ್ಯೋಗಾರ್ಹತೆ ಹೆಚ್ಚಿಸುವ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಿದ್ದಾರೆ. ಇವರ ಶೈಕ್ಷಣಿಕ ಆಸಕ್ತಿಗಳು ಮತ್ತು ವೃತ್ತಿಪರ ಚಟುವಟಿಕೆಗಳು ಸಮಗ್ರ ಶಿಕ್ಷಣ ಹಾಗೂ ವಿದ್ಯಾರ್ಥಿ ಸಬಲೀಕರಣದ ಬಗೆಗಿನ ಬಲವಾದ ಬದ್ಧತೆಯನ್ನು ಪ್ರತಿಬಿಂಬಿಸುತ್ತವೆ.
ಪ್ರಾಂಶುಪಾಲರಾಗಿ, ಡಾ. ತೊಲಗಿ ಅವರು ಸಂಸ್ಥೆಯ ಶೈಕ್ಷಣಿಕ ಮತ್ತು ಸಾಂಸ್ಥಿಕ ಬೆಳವಣಿಗೆಯನ್ನು ಮುನ್ನಡೆಸುವ ಜೊತೆಗೆ, ಶೈಕ್ಷಣಿಕ ಶ್ರೇಷ್ಠತೆ, ಕೌಶಲ-ಆಧಾರಿತ ಶಿಕ್ಷಣ, ನಾವೀನ್ಯತೆ, ಉದ್ಯೋಗಾರ್ಹತೆ ಮತ್ತು ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಯನ್ನು ಬಲಪಡಿಸುವ ನಿಟ್ಟಿನಲ್ಲಿ ಕೊಡುಗೆ ನೀಡಲು ಉದ್ದೇಶಿಸಿದ್ದಾರೆ.

## ನೇಕಾರಿಕೆ ತರಬೇತಿ ಅರ್ಜಿ ಅಹ್ವಾನ

**ಸತ್ಯಮಿಥ್ಯ ಸುದ್ದಿಮೂಲ ಗದಗ :**
ವಿದ್ಯುತ್‌ಮಗ್ಗದಲ್ಲಿ ನೇಯ್ಗೆ ತರಬೇತಿ ಮತ್ತು ಜಾಬರ ತರಬೇತಿ ಕಾರ್ಯಕ್ರಮವನ್ನು ವಿದ್ಯುತ್ ಮಗ್ಗ ಸೇವಾ ಕೇಂದ್ರ, ನರಸಾಪುರ, ಬೆಟಗೇರಿಯಲ್ಲಿ ಹಮ್ಮಿಕೊಳ್ಳಲಾಗಿದೆ. ತರಬೇತಿಯನ್ನು ಪಡೆಯಲು ಅಭ್ಯರ್ಥಿಗಳು 18 ರಿಂದ 35 ವರ್ಷ ವಯಸ್ಸಿನೊಳಗಿರಬೇಕು, ಕನಿಷ್ಠ 5ನೇ ತರಗತಿ ಪಾಸಾಗಿರಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ನಿಯಮಾನುಸಾರ ಆದ್ಯತೆ ನೀಡಲಾಗುವುದು. ತರಬೇತಿಯನ್ನು ಪಡೆಯಲು ಆಸಕ್ತಿವುಳ್ಳ ಅಭ್ಯರ್ಥಿಗಳು ಅರ್ಜಿಗಳನ್ನು ಸಹಾಯಕ ನಿರ್ದೇಶಕರು/ಪ್ರಭಾರಾಧಿಕಾರಿಗಳು, ವಿದ್ಯುತ್ ಮಗ್ಗ ಸೇವಾ ಕೇಂದ್ರ, ಶೆಡ್ಡ್ ಸಂಖ್ಯೆ 54, ಕೆ.ಎಸ್.ಟಿ.ಐ.ಡಿ.ಸಿ. ಪಾವರಲೂಮ್ ಪಾರ್ಕ, ನರಸಾಪುರ, ಬೆಟಗೇರಿ-ಗದಗ ಕಛೇರಿಯಲ್ಲಿ ಪಡೆದು, ಭರ್ತಿಮಾಡಿದ ಅರ್ಜಿಗಳನ್ನು ಕಛೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂರವಾಣಿ ಸಂಖ್ಯೆ 08372-297322ಕ್ಕೆ ಸಂಪರ್ಕಿಸಬಹುದು ಎಂದು ವಿದ್ಯುತ್ ಮಗ್ಗ ಸೇವಾ ಕೇಂದ್ರದ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಾ. ಎಂ.ಎಂ. ಕಲಬುರ್ಗಿ ಅಧ್ಯಯನ ಇಂದಿನ ವಿದ್ಯಾರ್ಥಿಗಳಿಗೆ ದಾರಿದೀಪ': ವೀರಣ್ಣ ರಾಜೂರ

**ಸತ್ಯಮಿಥ್ಯ ಸುದ್ದಿಮೂಲ ಗಜೇಂದ್ರಗಡ:**
"ಸಂಶೋಧನೆ, ಅಧ್ಯಾಪನ ಹಾಗೂ ಶಾಸನಗಳ ಶೋಧನೆಯಲ್ಲಿ ತೊಡಗಿಸಿಕೊಂಡಿದ್ದ ಡಾ. ಎಂ.ಎಂ. ಕಲಬುರ್ಗಿ ಅವರ ಬಹುಮುಖ ವ್ಯಕ್ತಿತ್ವವು ಇಂದಿನ ಯುವ ಪೀಳಿಗೆ ಹಾಗೂ ವಿದ್ಯಾರ್ಥಿಗಳಿಗೆ ದಾರಿದೀಪವಾಗಿದೆ," ಎಂದು ಡಾ. ಎಂ.ಎಂ. ಕಲಬುರ್ಗಿ ರಾಷ್ಟ್ರೀಯ ಪ್ರತಿಷ್ಠಾನದ ಅಧ್ಯಕ್ಷ ವೀರಣ್ಣ ರಾಜೂರ ಅಭಿಪ್ರಾಯಪಟ್ಟರು.
ಇಲ್ಲಿನ ಬಿ.ಎಸ್.ಎಸ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಧಾರವಾಡದ ಡಾ. ಎಂ.ಎಂ. ಕಲಬುರ್ಗಿ ರಾಷ್ಟ್ರೀಯ ಪ್ರತಿಷ್ಠಾನದ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದ್ದ 'ಡಾ. ಎಂ.ಎಂ. ಕಲಬುರ್ಗಿ ಅವರ ಸಾಹಿತ್ಯಿಕ ರೂಪಗಳಾದ ನಾಟಕ ಮತ್ತು ಕಾವ್ಯಗಳು' ಕುರಿತ ಏಕದಿನ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.
ಪ್ರತಿಷ್ಠಾನದ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ನೀಡಿದ ಅವರು, "ವಿವಿಧ ಭಾಗಗಳಲ್ಲಿ ವಿಶೇಷ ಉಪನ್ಯಾಸ, ವಿಚಾರ ಸಂಕಿರಣಗಳು, ಕೃತಿಗಳ ಬಿಡುಗಡೆ ಹಾಗೂ ಸಾಂಸ್ಕೃತಿಕ-ಸಾಹಿತ್ಯಿಕ ಕಾರ್ಯಕ್ರಮಗಳನ್ನು ನಿರಂತರವಾಗಿ ಆಯೋಜಿಸಲಾಗುತ್ತಿದೆ," ಎಂದರು.
ಖರೇ ಖರೇ ಸಂಗ್ಯಾ ಬಾಳ್ಯ (ನಾಟಕ) ಬೆಳಗಾವಿಯ ರಾಮಕೃಷ್ಣ ಮರಾಠೆ ಅವರಿಂದ ಉಪನ್ಯಾಸ. ಹಾಲುಮತ ಕಾವ್ಯಗಳ ಬಗ್ಗೆ ಹಂಪಿ ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕ ಎಫ್.ಟಿ. ಹಳ್ಳಿಕೇರಿ ಅವರಿಂದ ವಿಷಯ ಮಂಡನೆ. ನೀರು ನೀರಡಿಸಿತು ಕವನ ಸಂಕಲನ ಕುರಿತು ಬೆಳಗಾವಿ ಆರ್.ಪಿ.ಡಿ. ಪದವಿ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಎಚ್.ಬಿ. ಕೋಲ್ಕಾರ್ ಅವರಿಂದ ವಿಶ್ಲೇಷಣೆ ನಡೆಯಿತು. ಕಾಲೇಜಿನ ಪ್ರಾಚಾರ್ಯ ಬಸವಂತಪ್ಪ ಹೊಸಳ್ಳಿ ಅಧ್ಯಕ್ಷತೆ ವಹಿಸಿದ್ದ ಈ ಕಾರ್ಯಕ್ರಮದಲ್ಲಿ ಪ್ರತಿಷ್ಠಾನದ ಸದಸ್ಯರಾದ ಹನುಮಾಕ್ಷಿ ಗೋಗಿ, ಚಂದ್ರಶೇಖರ ವಸ್ತದ, ಹಾಗೂ ಪ್ರಮುಖರಾದ ರಾಘವೇಂದ್ರ ಜುಂಜಾ, ಫಕೀರಪ್ಪ ಕುರುಬರ, ವಿ.ಬಿ. ಸಣ್ಣಸಕ್ಕರಗೌಡರ ಮತ್ತು ಯಮುನಪ್ಪ ಮೇಗೂರ ಭಾಗವಹಿಸಿದ್ದರು.




## ಶಿವಯೋಗಿ ಸಿದ್ಧರಾಮೇಶ್ವರ ಮೂರ್ತಿ ಸ್ಥಾಪನೆ ಅನುಮತಿ ಕೋರಿ ಡಿಸಿಗೆ ಮನವಿ

**ಸತ್ಯಮಿಥ್ಯ ಸುದ್ದಿಮೂಲ ಗಜೇಂದ್ರಗಡ:**
ಪಟ್ಟಣದಲ್ಲಿ ಭೋವಿ (ವಡ್ಡರ) ಸಮಾಜದ ಕುಲಗುರುಗಳಾದ 12ನೇ ಶತಮಾನದ ಮಹಾನ್ ಶಿವಯೋಗಿ ಶ್ರೀ ಸಿದ್ಧರಾಮೇಶ್ವರರ ಮೂರ್ತಿ ಸ್ಥಾಪನೆಗೆ ಸೂಕ್ತ ಅನುಮತಿ ನೀಡಬೇಕೆಂದು ಶ್ರೀ ಸಿದ್ಧರಾಮೇಶ್ವರ ಭೋವಿ (ವಡ್ಡರ) ಸಮಾಜದ ಕ್ಷೇಮಾಭಿವೃದ್ಧಿ ಸಂಘವು ಗದಗ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.
ಗಜೇಂದ್ರಗಡ ಪಟ್ಟಣದಲ್ಲಿ ಕಾಯಕ ಶ್ರಮಜೀವಿಗಳಾದ ಭೋವಿ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಸಮಾಜದ ದೈನಂದಿನ ಆರಾಧನೆ ಹಾಗೂ ಗೌರವಾರ್ಥವಾಗಿ ಸಿದ್ಧರಾಮೇಶ್ವರರ ಮೂರ್ತಿ ಸ್ಥಾಪನೆ ಅತ್ಯಗತ್ಯವಾಗಿದೆ ಎಂದು ಸಂಘದ ಮುಖಂಡರು ಪತ್ರದಲ್ಲಿ ತಿಳಿಸಿದ್ದಾರೆ.
ಕಳೆದ 32 ವರ್ಷಗಳಿಂದ ಶ್ರೀ ದುರ್ಗಾದೇವಿ ದೇವಸ್ಥಾನದ ಎದುರುಗಡೆ ಹಾದುಹೋಗುವ ಬನಾಪುರ - ಗದ್ದನಕೇರಿ ಕ್ರಾಸ್ (ಎನ್.ಹೆಚ್.367) ರಸ್ತೆಯ ಮಧ್ಯಭಾಗದಲ್ಲಿ ಶ್ರೀ ಸಿದ್ಧರಾಮೇಶ್ವರ ಶಿವಯೋಗಿಗಳ ನಾಮಫಲಕ ಹಾಗೂ ಭಾವಚಿತ್ರವನ್ನು ಇಡಲಾಗಿದೆ. ಆದ್ದರಿಂದ, ಸಮಾಜದ ಮುಖಂಡರು ಸಭೆ ಸೇರಿ ಅದೇ ಜಾಗದಲ್ಲಿ ಶ್ರೀ ಸಿದ್ಧರಾಮೇಶ್ವರರ ಮೂರ್ತಿಯನ್ನು ಸ್ಥಾಪಿಸಲು ನಿರ್ಧರಿಸಿದ್ದಾರೆ. ಈ ಸಂಬಂಧ ಸಂಬಂಧಪಟ್ಟ



ಅಧಿಕಾರಿಗಳು ಮೂರ್ತಿ ಸ್ಥಾಪನೆಗೆ ಶೀಘ್ರವೇ ಅನುಮತಿ ನೀಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಕೋರಿಕೊಂಡರು .
ಈ ಮನವಿ ಪತ್ರಕ್ಕೆ ಸಂಘದ ಅಧ್ಯಕ್ಷರಾದ ಮಾರುತಿ ಕಲ್ಲೋಡ್ಡರ, ಯಲ್ಲಪ್ಪ ಬಂಕದ, ಮುದಿಯಪ್ಪ ಮುಧೋಳ್, ಶರಣಪ್ಪ ಚಳಗೇರಿ, ಎಫ್. ಎಸ್. ಕರೆದುರಗಣ್ಣವರ, ಹನಮಂತಪ್ಪ ಮುಧೋಳ್ ಹಾಗೂ ಸಮುದಾಯದ ಇತರ ಪ್ರಮುಖ ಮುಖಂಡರು ಇದ್ದರು.

## ದೀರ್ಘಾಯುಷ್ಯ, ಆರೋಗ್ಯಕರ ಜೀವನಕ್ಕೆ ಜೀವನ ಕ್ರಮಗಳ ಮರುಚಿಂತನೆ ಅಗತ್ಯ: ಜಿಲ್ಲಾಧಿಕಾರಿ

**ಸತ್ಯಮಿಥ್ಯ ಸುದ್ದಿಮೂಲ ಗದಗ :**
ದೀರ್ಘಾಯುಷ್ಯ ಹಾಗೂ ಸುದೀರ್ಘ ಜೀವನಕ್ಕಾಗಿ ನಮ್ಮ ದಿನನಿತ್ಯದ ಜೀವನದ ಕ್ರಮಗಳನ್ನು ಮರುಚಿಂತನೆ ಮಾಡುವುದು ಅತ್ಯಗತ್ಯ" ಹಿರಿಯರ ಅನುಭವಗಳನ್ನು ಯುವ ಪೀಳಿಗೆ ಅಳವಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಸಿ. ಎನ್. ಶ್ರೀಧರ ತಿಳಿಸಿದರು.
ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಗುರುವಾರ ಅಕ್ಟೋಬರ್ (1) ರಂದು ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಹಾಗೂ ಸ್ವಯಂ ಸೇವಾ ಸಂಘ ಸಂಸ್ಥೆಗಳು ಮತ್ತು ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘಗಳು ಇವರುಗಳ ಸಹಯೋಗದಲ್ಲಿ ಜರುಗಿದ ದೀರ್ಘಾಯುಷ್ಯದ ಯುಗ ಸುಧೀರ್ಘ ಜೀವನಕ್ಕಾಗಿ ಜೀವನ ಕ್ರಮಗಳ ಮರುಚಿಂತನೆ ಘೋಷವಾಕ್ಯದೊಂದಿಗೆ ವಿಶ್ವ ಹಿರಿಯ ನಾಗರಿಕರ ದಿನಾಚರಣೆ 2026 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.
ಮನುಷ್ಯನಿಗೆ ವಯಸ್ಸಾದಂತೆ ಅನುಭವ ಹೆಚ್ಚುತ್ತದೆ, ಅನುಭವಕ್ಕೆ ಯಾವುದೇ ಪರ್ಯಾಯವಿಲ್ಲ. ಹಿರಿಯರು ತಮ್ಮ ಜೀವನದಲ್ಲಿ ಕಲಿತ ಅನುಭವಗಳನ್ನು ಕಿರಿಯರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಸಮಾಜದಲ್ಲಿ ತಪ್ಪುಗಳು ಕಡಿಮೆಯಾಗುತ್ತವೆ. ಪ್ರಸ್ತುತ ದಿನಮಾನಗಳಲ್ಲಿ ಸಣ್ಣ/ವಿಭಕ್ತ ಕುಟುಂಬಗಳು ಹೆಚ್ಚಾಗುತ್ತಿದ್ದು, ಹಿರಿಯರನ್ನು ಕೈಬಿಡುವ ಪ್ರವೃತ್ತಿ ಹೆಚ್ಚುತ್ತಿದೆ. ಇದರ ಜೊತೆಗೆ ಹಿರಿಯರ ಅನುಭವವನ್ನು ಅಳವಡಿಸಿಕೊಳ್ಳುವ ಮತ್ತು ಅವರೊಂದಿಗೆ ಸಮಯ ಕಳೆಯುವ ಅಗತ್ಯತೆ ಇಂದು ಸಮಾಜಕ್ಕೆ ಕುಟುಂಬ ವ್ಯವಸ್ಥೆ ಮತ್ತು ಹಿರಿತನ ಹೆಚ್ಚಾಗಿದೆ ಎಂದರು.
ನಿಶ್ಚಿಂತೆ ಮತ್ತು ಸಕ್ರಿಯ ಜೀವನಕ್ಕೆ ದೀರ್ಘಾಯುಷ್ಯದ ಮೂಲ ರಹಸ್ಯ. ಮನಸ್ಸು ಮತ್ತು ದೇಹ ಒಂದಾಗಿ ಸಾಗಿದಾಗ




ವಯಸ್ಸಿನ ಸವಾಲುಗಳನ್ನು ಸುಲಭವಾಗಿ ಎದುರಿಸಬಹುದು. ವಯಸ್ಸು ಎನ್ನುವುದು ಕೇವಲ ಒಂದು ಸಂಖ್ಯೆಯಷ್ಟೇ. ಹಿರಿಯರು ತಾವೆಲ್ಲ ಕಂಡ ಅನುಭವದ ಸಾರವನ್ನು ಯುವ ಪೀಳಿಗೆಗೆ ಹಂಚಬೇಕು ಮತ್ತು ಕಿರಿಯರು ಹಿರಿಯರ ಮಾರ್ಗದರ್ಶನದಲ್ಲಿ ಸಾಗಬೇಕು ಎಂದು ಜಿಲ್ಲಾಧಿಕಾರಿಗಳು ಕರೆ ನೀಡಿದರು.
ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಅಧಿಕಾರಿ ಶ್ರೀಮತಿ ಶ್ರೀದೇವಿ ಎಸ್.ಎನ್. ಸರ್ವರನ್ನು ಸ್ವಾಗತಿಸಿದರು. ಜ್ಞಾನಸಿಂಧು ರೆಸಿಡೆನ್ಸಿಯಲ್ ಅಂದ ಮಕ್ಕಳ ಶಾಲೆ ಹೊಳೆಆಲೂರು ವಿದ್ಯಾರ್ಥಿಗಳಿಂದ ರಾಷ್ಟಗೀತೆ ಮತ್ತು ನಾಡಗೀತೆ ಪ್ರಸ್ತುತ ಪಡಿಸಿದರು. ಪ್ರೊ. ಶಕುಂತಲಾ ಸಿಂಧೂರು ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು.
ಇದೇ ಸಂದರ್ಭದಲ್ಲಿ ವಿಶ್ವ ಹಿರಿಯ ನಾಗರಿಕರ ದಿನಾಚರಣೆ-ಯ 2026 ರ ಪ್ರಯುಕ್ತ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಹಿರಿಯ ನಾಗರಿಕರಿಗೆ ಗೌರವಿಸಿ ಸನ್ಮಾನಿಸಲಾಯಿತು. ಸಾಂಸ್ಕೃತಿಕ ಸ್ಪರ್ಧೆ ಮತ್ತು ಕ್ರೀಡೆ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದ ಹಿರಿಯ ನಾಗರಿಕರಿಗೆ ಬಹುಮಾನ ವಿತರಿಸಲಾಯಿತು.
ಈ ಕಾರ್ಯಕ್ರಮದಲ್ಲಿ ಜಿಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮುಕುಲ್ ಜೈನ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ರಾಧಾ ಮಣ್ಣೂರು, ಕೋ-ಆಫ್ ಕ್ರೆಡಿಟ್ ಸೊಸೈಟಿ ನಿವೃತ್ತ ಸರ್ಕಾರಿ ನೌಕರ ಬಿ. ಎಮ್. ಬಿಳೆಯಲಿ, ಕರ್ನಾಟಕ ರಾಜ್ಯ ಜಿಲ್ಲಾ ನಿವೃತ್ತ ಸರ್ಕಾರಿ ನೌಕರರ ಸಂಘ ಕೆ. ಎಚ್. ಬೇಲೂರು, ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿ ಸಂಘ ಹಾಗೂ ಜಿಲ್ಲಾ ನಿವೃತ್ತ ಸರ್ಕಾರಿ ನೌಕರರ ಜಿ.ಎಸ್. ಹಿರೇಮಠ, ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿ ಸಂಘ ಹಾಗೂ ನಿವೃತ್ತ ನೌಕರರ ಎಸ್. ಕೆ. ಖಂಡಪ್ಪಗೌಡ್ರ ಸೇರಿದಂತೆ ಹಿರಿಯ ನಾಗರಿಕರು, ಅಂಗವಿಕಲರ ಇಲಾಖೆಯ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಸಾರ್ವಜನಿಕರಿಗೆ ಮೌಲ್ಯಯುತ ಸೇವೆ ಒದಗಿಸಿ: ಸಿದ್ರಾಮೇಶ್ವರ

**ಸತ್ಯಮಿಥ್ಯ ಸುದ್ದಿಮೂಲ ಕೊಪ್ಪಳ :**
ಸಾರ್ವಜನಿಕರಿಗೆ ಅಗತ್ಯ ಸಹಕಾರ ನೀಡುತ್ತಾ, ಮೌಲ್ಯಯುತ ಸೇವೆ ಒದಗಿಸಿ ಎಂದು ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರು ಹೇಳಿದರು.
ಗುರುವಾರದಂದು ನೂತನವಾಗಿ ಆರಂಭವಾದ ಕೊಪ್ಪಳ ಜಿಲ್ಲೆಯ ಮೊದಲ ಆಧಾರ್ ಸೇವಾ ಕೇಂದ್ರವನ್ನು ಉದ್ಘಾಟಿಸಿ ಅವರು ಮಾತನಾಡಿದರು.
ಬಹುತೇಕ ಗ್ರಾಮೀಣ ಭಾಗದ ಜನರೇ ಕೇಂದ್ರಕ್ಕೆ ಆಗಮಿಸುವುದರಿಂದ ಅವರೊಂದಿಗೆ ಸೌಜನ್ಯದಿಂದ ವರ್ತಿಸಿ, ಅಗತ್ಯ ಸಹಕಾರ ನೀಡಿ. ಸರ್ಕಾರದಿಂದ ನಿಗದಿಯಾದ ಸೇವೆ ಆಧಾರಿತ ಶುಲ್ಕವನ್ನು ಭರಿಸಿಕೊಂಡು ಸಾರ್ವಜನಿಕರಿಗೆ ಸೇವೆ ಒದಗಿಸಿ. ಕೇಂದ್ರಕ್ಕೆ ಆಗಮಿಸುವ ಹಿರಿಯ ನಾಗರಿಕರು, ವಿಕಲಚೇತನರು, ಗರ್ಭಿಣಿ ಮಹಿಳೆಯರು, ಶಿಶುಗಳೊಂದಿಗೆ ಬರುವ ತಾಯಂದಿರಿಗೆ ಆದ್ಯತೆ ಮೇರೆಗೆ ಸೇವೆ ಒದಗಿಸಿ, ಗೌರವಯುತವಾಗಿ ವರ್ತಿಸಿ ಎಂದು ಅವರು ಹೇಳಿದರು. ನಂತರ ಕೇಂದ್ರದ ಕಾರ್ಯವೈಖರಿಯ ಬಗ್ಗೆ ಕೇಂದ್ರದ ಮುಖ್ಯಸ್ಥರೊಂದಿಗೆ ಚರ್ಚಿಸಿದರು.
ಈ ಸಂದರ್ಭದಲ್ಲಿ ಬಿಎಲ್ಎಸ್ ನ ಪ್ರಾದೇಶಿಕ ವ್ಯವಸ್ಥಾಪಕ ನರೇಶ್, ಯುಐಡಿಎಐ ಬೆಂಗಳೂರಿನ ಪ್ರಾದೇಶಿಕ ಕಚೇರಿಯ ಸಹಾಯಕ ವ್ಯವಸ್ಥಾಪಕ ಚೇತನ್, ಸೀನಿಯರ್ ಅಕೌಂಟ್ ಅಧಿಕಾರಿ ರಮೇಶ್ ಕಟುಕಮ್, ಆಧಾರ್ ಸೇವಾ ಕೇಂದ್ರದ ವ್ಯವಸ್ಥಾಪಕ ರಮೇಶ್ ಸೇರಿದಂತೆ, ಕೇಂದ್ರದ ಸಿಬ್ಬಂದಿ, ಸಾರ್ವಜನಿಕರು ಉಪಸ್ಥಿತರಿದ್ದರು.
ಆಧಾರ್ ಸೇವಾ ಕೇಂದ್ರದ ಪರಿಚಯ:




ಜಿಲ್ಲೆಯಲ್ಲಿ ನೂತನವಾಗಿ ಆರಂಭವಾದ ಆಧಾರ್ ಸೇವಾ ಕೇಂದ್ರವು ಜಿಲ್ಲೆಯ ಮೊದಲ ಎಎಸ್‌ಕೆ ಕೇಂದ್ರವಾಗಿದ್ದು, ರಾಜ್ಯದಲ್ಲಿ 19ನೇ ಕೇಂದ್ರವಾಗಿ ಆರಂಭಗೊಂಡಿದೆ. ಜಿಲ್ಲೆಯ ಇತರ ಭಾಗಗಳಲ್ಲಿ ಹಂತ ಹಂತವಾಗಿ ಎಎಸ್‌ಕೆ ಕೇಂದ್ರಗಳನ್ನು ಆರಂಭಿಸುವ ಯೋಜನೆ ಇದೆ. ನೂತನ ಆಧಾರ್ ಸೇವಾ ಕೇಂದ್ರವು ಕೊಪ್ಪಳದ ಗಂಜ್ ವೃತ್ತದ ಕುಷ್ಟಗಿ ರಸ್ತೆಯ ಮೇಲ್ಸೇತುವೆ ಕೆಳಗೆ ಬರುವ ಬಜಾಜ್ ಶೋ ರೂಂ ಪಕ್ಕದ ಕೊತ್ಬಾಳ ಕಟ್ಟಡದ ನೆಲಮಹಡಿಯಲ್ಲಿದೆ. ಗಂಜ್ ವೃತ್ತಕ್ಕೆ ಹತ್ತಿರವಾಗಿರುವುದರಿಂದ ಸಾರ್ವಜನಿಕರಿಗೆ ಕೇಂದ್ರ-ಕ್ಕೆ ಆಗಮಿಸಲು ಅನುಕೂಲವಾಗಲಿದೆ. ಸಾರ್ವಜನಿಕರು ಸರ್ಕಾರ ನಿಗದಿಪಡಿಸಿದ ಸೇವೆ ಆಧಾರಿತ ಶುಲ್ಕವನ್ನು ಮಾತ್ರ ಭರಿಸಬೇಕು. ಕೇಂದ್ರವು ಮುಖ್ಯವಾಗಿ ಒಟ್ಟು 4 ಕೌಂಟರ್‌ಗಳನ್ನು ಒಳಗೊಂಡಿದೆ. ಇದರೊಂದಿಗೆ ಟೋಕನ್ ಕೌಂಟರ್, ಕ್ಯಾಶ್ ಕೌಂಟರ್ ಪ್ರತ್ಯೇಕವಾಗಿದ್ದು, ಪುರುಷ ಮತ್ತು ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಸಾರ್ವಜನಿಕರಿಗೆ ಕುಳಿತುಕೊಳ್ಳಲು ಆಸನ ವ್ಯವಸ್ಥೆಯನ್ನು ಹೊಂದಿದ್ದು, ಒಟ್ಟು 9 ಜನ ಸಿಬ್ಬಂದಿಯೊಂದಿಗೆ ಸರ್ಕಾರಿ ಕೆಲಸದ ದಿನಗಳಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ಆಧಾರ್ ಸೇವಾ ಕೇಂದ್ರ ಕಾರ್ಯ ನಿರ್ವಹಿಸಲಿದೆ.

# ಸರಳತೆ ಶಕ್ತಿ, ವಿದ್ವತ್ತು ಸಂಪತ್ತು, ಸಮಾಜಮುಖಿ ಚಿಂತನೆ ಉಸಿರು

ಕೆಲವು ವ್ಯಕ್ತಿಗಳನ್ನು ನಾವು ಭೇಟಿಯಾಗುವುದಿಲ್ಲ, ಅವರ ಸಾನ್ನಿಧ್ಯವನ್ನು ಅನುಭವಿಸುತ್ತೇವೆ. ಕೆಲವು ಮಾತುಗಳನ್ನು ನಾವು ಕೇಳುವುದಿಲ್ಲ, ಅವುಗಳನ್ನು ಮನಸ್ಸಿನಲ್ಲಿ ಬದುಕುತ್ತೇವೆ. ಕೊಪ್ಪಳ ಗವಿಮಠದ ಅಭಿನವ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಗಳು ಅಂತಹ ಅಪರೂಪದ ಸಂತ ಪರಂಪರೆಗೆ ಸೇರಿದವರು.

ಒಬ್ಬ ಸಂತ ಹೇಗಿರಬೇಕು, ಜನರ ನಡುವೆ ಹೇಗೆ ಬದುಕಬೇಕು, ಸಮಾಜದ ನೋವಿಗೆ ಹೇಗೆ ಸ್ಪಂದಿಸಬೇಕು ಎಂಬುದನ್ನು ಅವರು ತಮ್ಮ ನಡೆ ನುಡಿಯ ಮೂಲಕವೇ ತೋರಿಸಿಕೊಟ್ಟಿದ್ದಾರೆ.

ಐತಿಹಾಸಿಕ ಹಿನ್ನೆಲೆ ಮತ್ತು ಪೀಠಾರೋಹಣ

ಕೊಪ್ಪಳ ನಗರದಲ್ಲಿರುವ ಸುಪ್ರಸಿದ್ಧ ಗವಿಮಠಕ್ಕೆ ನೂರಾರು ವರ್ಷಗಳ ಇತಿಹಾಸವಿದೆ. ಮಠದ ಪ್ರಮುಖ ಆರಾಧ್ಯ ಕೇಂದ್ರ ಗವಿಸಿದ್ದೇಶ್ವರ ಕರ್ತೃ ಗದ್ದುಗೆ, ಇದು ಮಠದ 11ನೇ ಪೀಠಾಧಿಪತಿಯಾಗಿದ್ದ ಗವಿಸಿದ್ದೇಶ್ವರ ಸ್ವಾಮೀಜಿಯವರ ಕ್ರಿಯಾಸಮಾಧಿ ಸ್ಥಳವಾಗಿದೆ.

2002ರ ಡಿಸೆಂಬರ್ 13ರಂದು ಶ್ರೀ ಗವಿಸಿದ್ದೇಶ್ವರ ಮಹಾಸಂಸ್ಥಾನದ 18ನೇ ಪೀಠಾಧಿಪತಿಗಳಾಗಿ ಅಭಿನವ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಗಳು ಪಟ್ಟಾಭಿಷಿಕ್ತರಾದರು. ಅಂದಿನಿಂದ ಇಂದಿನವರೆಗೆ ಸುಮಾರು ಎರಡು ದಶಕಗಳಿಗೂ ಹೆಚ್ಚು ಕಾಲ ಅವರು ಮಠವನ್ನು ಮುನ್ನಡೆಸುತ್ತಿದ್ದಾರೆ.

ಪೀಠವೇರಿದ ನಂತರ ಅವರು ಮಠವನ್ನು ಕೇವಲ ಪೂಜಾ ಕೇಂದ್ರವಾಗಿ ಉಳಿಸಲಿಲ್ಲ. ಅದನ್ನು ಅರಿವಿನ ದೀವಿಗೆ, ಸೇವೆಯ ತಾಣ, ಸಾಮಾಜಿಕ ಪರಿವರ್ತನೆಯ ಕೇಂದ್ರವಾಗಿ ರೂಪಿಸಿದರು.

ತ್ರಿವಿಧ ದಾಸೋಹ : ಅನ್ನ, ಅಕ್ಷರ, ಅರಿವು

ಗವಿಮಠ ಇಂದು ರಾಜ್ಯದ ಎರಡನೇ ಸಿದ್ಧಗಂಗಾ ಎಂಬ ಹೆಸರು ಪಡೆಯಲು ಕಾರಣವಾಗಿರುವುದು ಸ್ವಾಮೀಜಿಗಳ ತ್ರಿವಿಧ ದಾಸೋಹದ ಸಂಕಲ್ಪ.

ಅನ್ನ ದಾಸೋಹ: ಪ್ರತಿದಿನ ಸಾವಿರಾರು ಭಕ್ತರಿಗೆ, ವಿದ್ಯಾರ್ಥಿಗಳಿಗೆ ಪ್ರಸಾದ ರೂಪದಲ್ಲಿ ಊಟ. ಗವಿಜಾತ್ರೆಯ ಸಂದರ್ಭದಲ್ಲಿ ಲಕ್ಷಾಂತರ ಭಕ್ತರಿಗೆ ಅತ್ಯಂತ ಶಿಸ್ತುಬದ್ಧವಾಗಿ ನಡೆಯುವ ಮಹಾದಾಸೋಹ ದಕ್ಷಿಣ ಭಾರತದಲ್ಲೇ ಮಾದರಿ.

ಅಕ್ಷರ ದಾಸೋಹ: ಪೂರ್ವ ಪ್ರಾಥಮಿಕದಿಂದ ಸ್ನಾತಕೋತ್ತರ ಪದವಿಯವರೆಗೆ ಶಿಕ್ಷಣ ಸಂಸ್ಥೆಗಳ ಸ್ಥಾಪನೆ. ಬಡ ಮಕ್ಕಳಿಗೆ ಉಚಿತ



ಶಿಕ್ಷಣ, ವಸತಿ ಸೌಲಭ್ಯ. 1998ರಲ್ಲಿ ಸುಮಾರು 6 ಕೋಟಿ ರೂಪಾಯಿ ವೆಚ್ಚದಲ್ಲಿ ಸ್ಥಾಪನೆಯಾದ ಆಯುರ್ವೇದ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಸೇರಿದಂತೆ ಹಲವು ಶಿಕ್ಷಣ ಸಂಸ್ಥೆಗಳು ಇಂದು ಕಲ್ಯಾಣ ಕರ್ನಾಟಕದ ಸಾವಿರಾರು ಕುಟುಂಬಗಳ ಬದುಕನ್ನು ಬದಲಿಸಿವೆ.

ಅರಿವು ದಾಸೋಹ: ಕೇವಲ ಪದವಿ ನೀಡುವುದಲ್ಲ, ವೈಚಾರಿಕ ಅರಿವು ಮೂಡಿಸುವುದು. ಮೂಢನಂಬಿಕೆ ವಿರುದ್ಧ ಜಾಗೃತಿ, ಸಮಾಜ ಸುಧಾರಣೆ, ಪರಿಸರ ಪ್ರಜ್ಞೆ, ಮಹಿಳಾ ಸಬಲೀಕರಣದ ಬಗ್ಗೆ ನಿರಂತರ ಪ್ರವಚನ ಮತ್ತು ಕಾರ್ಯಕ್ರಮಗಳು.

ಈ ಭಾಗದ ನಡೆದಾಡುವ ದೇವರು ಎಂದೇ ಪ್ರಖ್ಯಾತಿ ಗಳಿಸಿರುವ ಸ್ವಾಮೀಜಿಗಳ ದೂರದೃಷ್ಟಿಯಿಂದ ಗವಿಮಠ ಕೇವಲ ಮಠವಾಗಿ ಉಳಿಯದೆ ಜನಪರ ಚಳವಳಿಯಾಗಿದೆ.

**ಜಲಋಷಿ ಎಂಬ ಹೆಸರು:** ಉತ್ತರ ಕರ್ನಾಟಕದ ಬಹುದೊಡ್ಡ ಸಮಸ್ಯೆ ನೀರಿನ ಅಭಾವ. ಇದನ್ನು ಮನಗಂಡ ಸ್ವಾಮೀಜಿಗಳು ಜಲ ದೀಕ್ಷೆ ಅಭಿಯಾನ ಆರಂಭಿಸಿದರು. ಹಿರೇಹಳ್ಳ ಪುನಶ್ಚೇತನ, ಕೆರೆಗಳ ಹೂಳೆತ್ತುವಿಕೆ, ಚೆಕ್ ಡ್ಯಾಂ ನಿರ್ಮಾಣ, ಅಂತರ್ಜಲ ಮರುಪೂರಣದಂತಹ ಬೃಹತ್ ಜಲಕ್ರಾಂತಿಯನ್ನು ಜನಸಹಭಾಗಿತ್ವದಲ್ಲಿ ನಡೆಸಿದರು. ಇದರಿಂದಾಗಿ ಅವರಿಗೆ ಜಲಋಷಿ ಎಂಬ ಗೌರವದ ಹೆಸರು ಬಂದಿದೆ. ಧಾರ್ಮಿಕ ಸಂತನೊಬ್ಬ ಪರಿಸರ ಹೋರಾಟಗಾರನಾಗಿ ನಿಂತದ್ದು ಕರ್ನಾಟಕದ ಆಧ್ಯಾತ್ಮಿಕ ಇತಿಹಾಸದಲ್ಲಿ ವಿಶೇಷ ಅಧ್ಯಾಯ.

**ದಕ್ಷಿಣದ ಕುಂಭಮೇಳ : ಗವಿಜಾತ್ರೆ:** ಪ್ರತಿವರ್ಷ ಜರಗುವ ಕೊಪ್ಪಳ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವಕ್ಕೆ ಲಕ್ಷಾಂತರ ಭಕ್ತರು ಸೇರುತ್ತಾರೆ. ಶಿಸ್ತು, ಸೌಹಾರ್ದತೆ, ಸ್ವಚ್ಛತೆ ಮತ್ತು ದಾಸೋಹಕ್ಕೆ ಹೆಸರಾದ ಈ ಜಾತ್ರೆಯನ್ನು ದಕ್ಷಿಣದ ಕುಂಭಮೇಳ ಎಂದು ಕರೆಯಲಾಗುತ್ತದೆ.

ಜಾತಿಯ, ಧರ್ಮದ, ಪ್ರದೇಶದ ಭೇದವಿಲ್ಲದೆ ಜನಸಾಗರ ಸೇರುವುದು ಗವಿಮಠದ ಜನಪರ ನಂಟಿಗೆ ಜೀವಂತ ಸಾಕ್ಷಿ.

ಮಾತಿನಲ್ಲಿ ಅನುಭವ

ಸ್ವಾಮೀಜಿಗಳ ಮಾತುಗಳನ್ನು ಮತ್ತೆ ಮತ್ತೆ ಕೇಳಬೇಕು ಅನ್ನಿಸುತ್ತದೆ. ಕಾರಣ, ಆ ಮಾತುಗಳಲ್ಲಿ ಕೇವಲ ಉಪದೇಶ ಇರುವುದಿಲ್ಲ. ಬದುಕಿನ ಅನುಭವವಿರುತ್ತದೆ, ತತ್ವವಿರುತ್ತದೆ, ಆದರ್ಶವಿರುತ್ತದೆ.

ಕೊಪ್ಪಳಕ್ಕೆ ಹೋದಾಗಲೆಲ್ಲ ಗವಿಮಠದ ಸನ್ನಿಧಿಗೆ ಹೋಗದ ಹಿಂದಿರುಗದ ಭಕ್ತರಿಗೆ ಇದು ಕೇವಲ ಭೇಟಿ ಅಲ್ಲ. ಮನಸ್ಸಿಗೆ ನೆಮ್ಮದಿ ನೀಡುವ, ಹೊಸ ಚಿಂತನೆಗೆ ದಾರಿ ಮಾಡಿಕೊಡುವ ಆತ್ಮೀಯ ಅನುಭವ. ಹಲವು ಬಾರಿ ಅವರೊಂದಿಗೆ ವೇದಿಕೆ ಹಂಚಿಕೊಂಡವರಿಗೆ ಅವರ ಪಕ್ಕದಲ್ಲಿ ಕುಳಿತ ಕ್ಷಣವೂ ವಿಶೇಷ ಅನುಭೂತಿ.

ದಸರಾ ಉದ್ಘಾಟನೆಗೆ ಅರ್ಥಪೂರ್ಣ ಆಯ್ಕೆ

ಈ ಬಾರಿಯ ವಿಶ್ವವಿಖ್ಯಾತ ಮೈಸೂರು ದಸರಾ 2026ರ ಉದ್ಘಾಟಕರಾಗಿ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಅವರನ್ನು ಆಯ್ಕೆ ಮಾಡಿರುವುದು ಅತ್ಯಂತ ಅರ್ಥಪೂರ್ಣ.

ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಗಮನಾರ್ಹ ಸೇವೆ ಸಲ್ಲಿಸುತ್ತಿರುವ ಶ್ರೀಗಳನ್ನು ಆಯ್ಕೆ ಮಾಡಿರುವುದು ಇದಕ್ಕೆ ಸಾಕ್ಷಿ. ಸಮಾಜದ ನಡುವೆ ಬದುಕುವ, ಜನರ ಹೃದಯದಲ್ಲಿ ಸ್ಥಾನ ಪಡೆದಿರುವ ಸಂತನಿಂದ ದಸರಾ ಉದ್ಘಾಟನೆಯಾಗುತ್ತಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ.

ಇದು ಒಬ್ಬ ವ್ಯಕ್ತಿಗೆ ಸಂದ ಗೌರವವಲ್ಲ, ಶರಣ ಪರಂಪರೆಯ ಜೀವಂತ ರೂಪಕ್ಕೆ, ತ್ರಿವಿಧ ದಾಸೋಹದ ತತ್ವಕ್ಕೆ ಸಂದ ಮನ್ನಣೆ.

ಅವರ ಸಮಾಜಮುಖಿ ಸೇವೆ, ಜ್ಞಾನ ಮತ್ತು ಮಾನವೀಯತೆಯ ಬೆಳಕು ಇನ್ನಷ್ಟು ದೂರ ಹರಡಲಿ. ಅವರ ಆಶಯಗಳು ಮತ್ತಷ್ಟು ಜನರ ಬದುಕಿಗೆ ದಾರಿದೀಪವಾಗಲಿ. ಗವಿಮಠದ ಈ ಜನಪರ ಪರಂಪರೆ ನಿರಂತರವಾಗಿ ಬೆಳೆಯಲಿ ಎಂಬುದು ಹೃದಯಪೂರ್ವಕ ಹಾಗೂ ಭಕ್ತಿಪೂರ್ವಕ ಹಾರೈಕೆಯೊಂದಿಗೆ ಪೂಜ್ಯ ಅಭಿನವ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಜಿಗಳ ದಿವ್ಯ ಪಾದಕಮಲಗಳಿಗೆ ಅನಂತ ಕೋಟಿ ಪ್ರಣಾಮಗಳು.

**ಕೊಪ್ಪಳ ಗವಿಮಠದ ಅಪರೂಪದ ಸಂತ : ಅಭಿನವ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಗಳು**

ಲೇಖನ:
ರಮೇಶ ನಾಯ್ಕ
ಪತ್ರಕರ್ತರು
ಲಿಂಗಸುಗೂರು

# ನೋಡ ಬನ್ನಿ ನಮ್ಮ ಕಪ್ಪತ್ತಗಿರಿಯ...



## ಉತ್ತರ ಕರ್ನಾಟಕದ ಸಹ್ಯಾದ್ರಿ... ಭೂರಮೆಯ ಸ್ವರ್ಗ ಕಪ್ಪತ್ತಗುಡ್ಡ....

ಕಪ್ಪತಗುಡ್ಡ – ಗದಗ ಜಿಲ್ಲೆಯ ಅಸ್ಮಿತೆ.... ಏಷ್ಯಾದ ಪರಿಶುದ್ಧ ಗಾಳಿಯ ಆಗರ.... ಪರಿಸರ ಪ್ರಿಯರ ನೆಚ್ಚಿನ ತಾಣ....

ಎಪ್ಪತ್ತು ಗಿರಿ ಸುತ್ತುವುದಕ್ಕಿಂತ ಕಪ್ಪತ್ತಗಿರಿ ಸುತ್ತುವುದು ಮೇಲು". ಕಣ್ಣಿದ್ದವನು ಕನಕಗಿರಿ ನೋಡಬೇಕು. ಕಾಲಿದ್ದವನು ಕಪ್ಪತ್ತಗುಡ್ಡ ನೋಡಬೇಕು' ಎನ್ನುವ ಹಲವಾರು ನುಡಿಗಟ್ಟುಗಳು ಕಪತ್ತಗಿರಿ ಕುರಿತು ಉತ್ತರ ಕರ್ನಾಟಕದಾದ್ಯಂತ ಮನೆ ಮಾತಾಗಿವೆ.

ಎಪ್ಪತ್ತು ಗಿರಿಗಳಿಗಿಂತ ಕಪ್ಪತ್ತಗಿರಿ ಮೇಲು ಇದು ಏಷ್ಯಾದ ಶುದ್ಧಗಾಳಿಯ (ಕಣಡಿಜ ಯಡಿ ಖಟಿ ಥಿಚಿ)ಕಾರ್ಖಾನೆ ಎಂದು ಹೇಳಿದರೆ ತಪ್ಪಾಗಲಾರದು.ಕಪ್ಪತ್ತಗಿರಿ (ಕಪ್ಪತಗುಡ್ಡ) ಉತ್ತರ ಕರ್ನಾಟಕದ ಸಹ್ಯಾದ್ರಿ, ಜೀವ ವೈವಿಧ್ಯ ತಾಣ. ಅಪಾರ ಖನಿಜ ಸಂಪತ್ತಿನ ಆಗರ ಮುಂಗಾರು ಮಳೆಯ ಸಿಂಚನದಿಂದ ಕಪ್ಪತಗುಡ್ಡ ಈಗ ಹೆಚ್ಚಿ ಹಸಿವಿನಿಂದ ಕಂಗೊಳಿಸುತ್ತಿದೆ. ಇದು ಪ್ರವಾಸಿಗರ ಆಕರ್ಷಣೆಗೆ ಪ್ರಮುಖ ಕಾರಣವಾಗಿದೆ.

ಈಗಂತೂ ಪ್ರವಾಸಿಗರಿಗಂತೂ ಭೂಲೋಕದ ಸ್ವರ್ಗವನ್ನೇ ಕಣ್ತುಂಬಿಕೊಂಡು ಸಂಭ್ರಮೀಸುವ ತಂಗಾಳಿ ಚದುರುತ್ತಿರುವ ಮೋಡಗಳನ್ನ ಇನ್ನೇನು ಓಡಿಸಿಕೊಂಡು ಹೋಗುವಂತಿದೆ.

ಶ್ವೇತಮೋಡಗಳ ನಡುವೆ ಹಚ್ಚಹಸಿರ ಪರ್ವತ ಕಣ್ಮನ ಸೆಳೆಯದೇ ಇರಲ್ಲ, ಗದಗ ಜಿಲ್ಲೆಯ ಶಿರಹಟ್ಟಿ ಹಾಗೂ ಮುಂಡರಗಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಈ ಕಪ್ಪತ್ತಗುಡ್ಡ ಏಷ್ಯಾದಲ್ಲಿಯೇ ಶುದ್ಧಗಾಳಿಗೆ ಹೆಸರುವಾಸಿ, ಹೀಗಾಗಿಯೇ ನೋಡಿ ವಾಯು ವಿಹಾರಕ್ಕೂ ಈ ಸ್ಪಾಟ್ ಪ್ರವಾಸಿಗರಿಗೆ ಹೇಳಿ ಮಾಡಿಸಿದಂತಿದೆ.ಪರಿಶುದ್ಧಗಾಳಿಬೀಸುವತಾಣವಾಗಿಯೂ ಪ್ರಸಿದ್ಧಿ ಪಡೆದಿದೆ. ಈ ಎಲ್ಲ ಕಾರಣಗಳಿಂದ ಕಪ್ಪತ್ತಗಿರಿಯನ್ನು ಉತ್ತರ ಕರ್ನಾಟಕದ ಸಹ್ಯಾದ್ರಿ ಎಂದು ಕರೆಯಲಾಗುತ್ತದೆ.

ಈ ತಾಣ ಹಸಿರ ಸೊಬಗು ತುಂಬಿರುವ ದಟ್ಟ ಕಾನನ, ಈ ಕಾಡಿನಲ್ಲಿ ಬೆಟ್ಟದ ತುದಿಯಲ್ಲಿ ಸುಮಾರು 250 ವರ್ಷಗಳ ಹಿಂದೆ ನಿರ್ಮಾಣವಾಗಿರುವ ಅನ್ನಜ್ಞಾನ ದಾಸೋಹ ಮಠವಿದೆ. ಅನೇಕ ಕೊಳ್ಳಗಳು, ಋಷಿಮುನಿಗಳು ತಪಸ್ಸು ಮಾಡಿರುವ ಸ್ಥಳಗಳು ಕಾಣಸಿಗುತ್ತವೆ. ಈ ಮಠವು ದಕ್ಷಿಣ ಸಸ್ಯಕಾಶಿಯೆಂದು ಪ್ರಖ್ಯಾತವಾಗಿದೆ.



ಲೇಖಕರು:
ರಮೇಶ ನಾಯ್ಕ
ಪತ್ರಕರ್ತರು
ಲಿಂಗಸುಗೂರು.

ಕಪತ್ತಗುಡ್ಡವು ಖನಿಜ, ನೈಸರ್ಗಿಕ ಸಂಪತ್ತು ಹೊಂದಿದೆ.ಈ ಪ್ರದೇಶವನ್ನು ಇತ್ತೀಚೆಗೆ ಕರ್ನಾಟಕ ಸರ್ಕಾರವು ವನ್ಯಜೀವಿ ಅಭಯಾರಣ್ಯವಾಗಿ ಘೋಷಿಸಿದೆ. ಒಟ್ಟಾಗಿ 17,872 ಹೆಕ್ಟೇರ್ ಇರುವ ಕಪ್ಪತಗುಡ್ಡ ಅರಣ್ಯ ಪ್ರದೇಶವು ಗದಗ ತಾಲೂಕಿನಲ್ಲಿ 401,811 ಹೆಕ್ಟೇರ್, ಮುಂಡರಗಿ ತಾಲೂಕಿನಲ್ಲಿ 15,433.673 ಹೆಕ್ಟೇರ್, ಮತ್ತು ಶಿರಹಟ್ಟಿ ತಾಲೂಕಿನಲ್ಲಿ 2016 ಹೆಕ್ಟೇರಗಳಷ್ಟು ಪ್ರದೇಶವನ್ನು ಹಂಚಿಕೊಂಡಿದೆ. ಇದರಲ್ಲಿ 89.92 ಹೆಕ್ಟೇರ್ ಔಷಧೀಯ ಸಸ್ಯಗಳ ಸಂಗ್ರಹಣೆಗೆ ಮಾತ್ರ ಮೀಸಲಿಡಲಾಗಿದೆ. ಈ ಪ್ರದೇಶವನ್ನು ನೂರಾರು ವರ್ಷಗಳಿಂದ ಔಷಧೀಯ ಸಸ್ಯಗಳ ವಾಸಸ್ಥಾನ ಎಂದು ಕರೆಯಲಾಗುತ್ತದೆ.ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಅಡಿಯಲ್ಲಿ ಬರುವ ಕಪ್ಪತ್ತಗುಡ್ಡದ ಪ್ರಸಿದ್ಧ ತಾಣಗಳಲ್ಲಿ ಒಂದಾದ ಶ್ರೀ ಗಜ್ಜಿ ಸಿದ್ದಾವಧೂತರ ಮಠ ಕಪತ್ತ ಮಲ್ಲೇಶ್ವರ ದೇವಸ್ಥಾನ.ಗಾಳಿಗುಂಡಿ

**ಬಸವಣ್ಣ ದೇವಸ್ಥಾನ ಹಾಗೂ ದೈವಿವನವಿದೆ. ಅಕ್ಕಪಕ್ಕದ ಜಿಲ್ಲೆಯ ಜನು:** ಕಪ್ಪತಗುಡ್ಡಕ್ಕೆ ಗದಗ ಮಾತ್ರವಲ್ಲದೇ ಕೊಪ್ಪಳ, ರಾಯಚೂರು, ಬಳ್ಳಾರಿ, ಹಾವೇರಿ ಮತ್ತು ಧಾರವಾಡ ಜಿಲ್ಲೆಯಿಂದ ಪ್ರವಾಸಿಗರು ಆಗಮಿಸುತ್ತಿದ್ದಾರೆ.

ಬಹಳಷ್ಟು ಜನ ಕೇರಳ, ಮಡಿಕೇರಿ, ಚಿಕ್ಕಮಗಳೂರು ಪ್ರವಾಸ ಕೈಗೊಳ್ಳುತ್ತಿದ್ದ ಜನ ಈಗೀಗ ಕಪ್ಪತಗುಡ್ಡಕ್ಕೆ ಭೇಟಿ ನೀಡುತ್ತಿದ್ದಾರೆ. ಈ ಬಾರಿ ಮಳೆ ಉತ್ತಮವಾಗಿ ಆಗುತ್ತಿರುವ ಕಾರಣ ಕಪ್ಪತಗುಡ್ಡ ಯಾವುದೇ ಗಿರಿಶಿಖರಗಳ ತಾಣಕ್ಕೂ ಕಡಿಮೆ ಇಲ್ಲದಂತೆ ಹಾವಿನಿಂದ ಕಂಗೊಳಿಸುತ್ತಿದೆ. ಹೀಗಾಗಿ ಪ್ರವಾಸಿಗರ ಸಂಖ್ಯೆಯೂ ಹೆಚ್ಚಾಗಿದೆ ಎನ್ನುತ್ತಾರೆ ಅರಣ್ಯ

**ಇಲಾಖೆ ಸಿಬ್ಬಂದಿಯವರು. ಔಷಧಿಗಳ ಸಸ್ಯಲೋಕ/ವನಸ್ಪತಿಗಳ ತಾಣ:** ಕಪ್ಪತ್ತಗುಡ್ಡ ಇಂದಿಗೂ ತನ್ನ ಮಣ್ಣು, ಗಿಡ, ಮರಗಳೆಲ್ಲದರಲ್ಲೂ ಔಷಧೀಯ ಗುಣ ಹೊಂದಿದೆ. ಅತೀ ಹೆಚ್ಚು ಆಯುರ್ವೇದಿಕ್ ಗಿಡಗಳನ್ನ ಹೊಂದಿರೋ ಕಾರಣಕ್ಕಾಗಿ ಇಲ್ಲಿಗೆ ಬಂದ್ ಹೋದ್ರೆ ಸಾಕು 'ಎಪ್ಪತ್ತು ಗಿರಿಗಳಿಗಿಂತ ಕಪ್ಪತ್ತಗಿರಿ ಮೇಲು' ಎಂಬುದು ಸಂದ ಪುರಾಣದಲ್ಲಿನ ಉಲ್ಲೇಖ.ಅಂದರೆ ಎಪ್ಪತ್ತು ಗಿರಿಗಳಲ್ಲಿ ಸಿಗದ ಔಷಧಿ ಗಿಡಮೂಲಿಕೆಗಳು ಕಪ್ಪತ್ತಗುಡ್ಡ ಒಂದರಲ್ಲೇ ಸಿಗುವ ಕಾರಣಕ್ಕೆ ಈ ಮಾತು ಬಂತೆಂದು ಹಿರಿಯರು ಹೇಳುತ್ತಾರೆ.

**ಗಿಡಮೂಲಿಕೆಗಳನ್ನು ಅರಸಿ ವರ್ಷವಿಡೀ:** ಇಲ್ಲಿಗೆ ಎಲ್ಲೆಲ್ಲಿಂದಲೋ ಜನ ಬರುತ್ತಲೇ ಇರುತ್ತಾರೆ. ಕಪತ್ರಗುಡ್ಡದಲ್ಲಿರುವ ಔಷಧೀಯ ಸಸ್ಯಗಳು: ಗುಡ್ಡದಲ್ಲಿ ಸಸ್ಯಗಳಾದ ಆದಿ, ಅತ್ತಿ, ಅರಳೆ, ಬನ್ನಿ, ಹೊಳೆಮತ್ತಿ, ನಾಗಲಿಂಗ ಪುಷ್ಪ, ಮಾವು ಅಂಟವಾಳ, ನೇರಳೆ, ಬೇವು, ಲೋಟಾನ ಮತ್ತು ಹಲಸು ಸೇರಿದಂತೆ ದೈವಿ ವನ ನಿರ್ಮಾಣ ಮಾಡಲಾಗಿದ್ದು, ಇದರ ಜೊತೆ ಸಾವಿರಾರು ಎಕರೆ ಪ್ರದೇಶದಲ್ಲಿ ಹೊಸ ಮೆರಗು ನೀಡಲಾಗಿದ್ದು ಹಸಿರು ಸಂವರ್ಧನೆಗೊಂಡು ನೆಲ,ಜಲ,ವನ್ಯಜೀವಿಗಳ ರಕ್ಷಣೆ ಇಲಾಖೆಯ ಮಂತ್ರ ಆಗಲಿದೆ.

**ಪ್ರಾಣಿ ಸಂಕುಲ:** ಕಪ್ಪತಗುಡ್ಡ ವನ್ಯಜೀವಿ ಅಭಯಾರಣ್ಯ ಸುಮಾರು 32,346 ಹೆಕ್ಟೇರ್‌ಗಳನ್ನು ಒಳಗೊಂಡಿದೆ ಮತ್ತು ಜಲ ಪ್ರದೇಶಗಳು, ಕಾಡುಗಳು, ಪೊದೆಗಳು ಮತ್ತುಹುಲ್ಲುಗಾವಲುಗಳುಸೇರಿದಂತೆವಿವಿಧಪರಿಸರ ವ್ಯವಸ್ಥೆಗಳನ್ನು ಹೊಂದಿದೆ. ಇದು ಲಂಗೂರ್‌ಗಳು ಜಿಂಕೆಗಳು, ಕಾಡು ಬೆಕ್ಕುಗಳು,ಪಕ್ಷಿಗಳು, ಕೃಷ್ಣಮೃಗಗಳು, ಚುಕ್ಕೆ ಜಿಂಕೆಗಳು, ಬೊಗಳುವ ಜಿಂಕೆಗಳು, ಚಿರತೆಗಳು, ಭಾರತೀಯ ತೋಳಗಳು ಮತ್ತು ಪಟ್ಟೆ ಪೈನಾಗಳಿಗೆ ಸುರಕ್ಷಿತ ತಾಣವಾಗಿದೆ ಎಂದು ಹೇಳಲಾಗುತ್ತದೆ.

ಹುಬ್ಬಳ್ಳಿ ವಿಮಾನ ನಿಲ್ದಾಣವು ಕಪ್ಪತಗುಡ್ಡಕ್ಕೆ ಹತ್ತಿರದಲ್ಲಿದೆ. ಇದು 64.5.ಕೀ ಮೀ ದೂರದಲ್ಲಿದೆ. ಮುಂದಿನ ಹತ್ತಿರದ ನಿಲ್ದಾಣವೆಂದರೆ ಬೆಳಗಾವಿಯ ಸಾಂದ್ರೆ, ವಿಮಾನ ನಿಲ್ದಾಣ, ಇದು ಸುಮಾರು 128 ಕಿ.ಮೀ ದೂರದಲ್ಲಿದೆ.ಗದಗ ನಗರದಿಂದ 33 ಕಿ ಮೀ. ಶಿರಹಟ್ಟಿ ಪಟ್ಟಣದಿಂದ 20 ಕೀ ಮೀ. ಲಕ್ಷೇಶ್ವರ ಪಟ್ಟಣದಿಂದ 38 ಕಿ ಮೀ ಹಾಗೂ ಮುಂಡರಗಿಯಿಂದ 39 ಕೀ. ಮೀ. ಹತ್ತಿರದ ಡೋಣಿ ಗ್ರಾಮದಿಂದ 3 ಕೀ. ಮೀ.ಗಳಷ್ಟು ದೂರದಲ್ಲಿದೆ. ಕಡಕೋಳದಿಂದ 5 ಕೀ ಮೀ ಗಳಷ್ಟು ದೂರದಲ್ಲಿದೆ.

**ವೀಕ್ಷಣೆಯ ಅವಧಿ:** ಜೂನ್ ದಿಂದ ಫೆಬ್ರುವರಿ ತಿಂಗಳ ವರೆಗೆ ಇಲ್ಲಿಗೆ ಭೇಟಿ ನೀಡುವುದು ಸೂಕ್ತ ಎನ್ನಬಹುದು.



### ಹಸಿರು ಹೊನ್ನು– ಹಸಿರು ಉಸಿರು:

ಒಟ್ಟಾರೆಯಾಗಿ ವಿದ್ಯಾದಲ್ಲಿಯೇ ಅತಿ ಹೆಚ್ಚು ಪರಿಶುದ್ಧ ಗಾಳಿಯ ಪ್ರದೇಶ ಎಂದು ಖ್ಯಾತಿ ಪಡೆದ ನಮ್ಮ ಈ ಕಪ್ಪತಗುಡ್ಡ ಅಥವಾ ಕಪತ್ತಗಿರಿ.ನೀವೂ ಒಮ್ಮೆ ಭೇಟಿ ನೀಡಿ.ಶುದ್ಧ ಗಾಳಿ ಉಸಿರಾಡಿ, 10 ವರ್ಷಗಳ ಹೆಚ್ಚಿನ ಆಯುಷ್ಯ ಆರೋಗ್ಯ ಪಡೆಯಿರಿ.. ಕೊನೆಯದಾಗಿ ಕಪ್ಪತ್ತಗುಡ್ಡವು ಪ್ರವಾಸಿತಾಣ ವ್ಯಾಪ್ತಿಗೆ ಒಳಪಟ್ಟರೆ ಇನ್ನೂ ಹೆಚ್ಚಿನ ಮಹತ್ವ ಪಡೆಯುತ್ತದೆ. ಅದು ಅರಣ್ಯ ನಾಶ ಹಾಗೂ ಪರಿಸರ ಮಾಲಿನ್ಯಕ್ಕೆ ರಹದಾರಿ ಮಾಡಿಕೊಟ್ಟಂತಾಗುತ್ತದೆ. ಪರಿಸರ ಸೂಕ್ಷ್ಮ ವಲಯಗಳು ಮಾನವನ ಹಸ್ತಕ್ಷೇಪದಿಂದ ದೂರವಿದ್ದಷ್ಟು ಒಳಿತು. ಕಪತ್ತಗುಡ್ಡವನ್ನು ಪ್ರವಾಸಿತಾಣವನ್ನಾಗಿ ಮಾಡಿದರೆ ಅಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತದೆ. ಅಲ್ಲಿನ ಪ್ರಾಣಿ ಸಂಕುಲ ಭಯದಿಂದ ನಾಡು ಸೇರಿ ಜನರ ಜೀವನದ ಅಸ್ತಿತ್ವಕ್ಕೆ ಧಕ್ಕೆ ಉಂಟು ಬರಬಹುದು ಹಾಗೂ ಪ್ಲಾಸ್ಟಿಕ್ ಮತ್ತು ಮತ್ತಿತರ ವಸ್ತುಗಳ ಬಳಕೆ ಹೆಚ್ಚಾಗುತ್ತದೆ. ಅಭಿವೃದ್ಧಿ ಹೆಸರಿನಲ್ಲಿ ಅರಣ್ಯ ಹಾಗೂ ವನ್ಯಜೀವಿಗಳು ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆ ಇದೆ. ಆದ್ದರಿಂದ ಕಪತ್ರಗುಡ್ಡವನ್ನು ಕಾಯ್ದುಕೊಳ್ಳಬೇಕು ಎಂಬುದು ಪರಿಸರ ಪ್ರಿಯರ ಲಕ್ಷಾಂತರ ಸಸಿಗಳ ಪಾಲನೆ–ಪೋಷಣೆ ಮಾಡುವ ಮೂಲಕ ಸಾವಿರಾರು ಹೆಕ್ಟೇರ್ ಈ ಪ್ರದೇಶದಲ್ಲಿ ದೈವಿ ವನ, ನೆಡುತೋಪುಗಳು ಮತ್ತು ರಸ್ತೆ ಬದಿ ಮರ ಬೆಳಸುವುದು ಶಾಲಾವನ, ಮಗುವಿಗೊಂದು ವನ ನಿರ್ಮಾಣ ಮಾಡುವುದು ಸೇರಿದಂತೆ 'ಹಸಿರು ಹೊನ್ನು–ಹಸಿರು ಉಸಿರು' ಯೋಜನೆ ಜಾರಿಗೊಳಿಸಿ ಕಪತ್ರಗುಡ್ಡದ ಅಪತ್ತುನ್ನು ದೂರಗೊಳಿಸುವ ಕಾಲ ಸನ್ನಿಹತವಾಗಿದೆ ಎಂದು ಹೇಳಲು ಖುಷಿ ಎನಿಸುತ್ತದೆ.

SATYAMITHI KANNADA DAILY MORNING OWNER, PUBLISHER, BY: CHANNAVEERAPPA NINGAPPA SAMAGANDI PUBLISHED FROM: KELAGAL{ETH, NEAR BASAVESHWAR DEVASTAN, HOME NO. 169, WARD NO, 4 MAIN ROAD GAJEDRAGAD, GADAG KARNATAKA - 582114 PRINTED AT: MAILARALINGESHWAR PRINTERS, WARD NO, 3, SUDI TQ, GAJENDRAGAD, GADAG, KARNATAKA- 582114